# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 21-03-2022



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ಉದಯ ವಾಣಿ
6. ವಿಶ್ವವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ

### ವಾತಾವರಣ ದೂಳುಮಯ, ಅಗೆದ ರಸ್ತೆಯನ್ನು ಮುಚ್ಚುವುದು ಯಾವಾಗ– ಸ್ಥಳೀಯರ ಪ್ರಶ್ನೆ

# ಬೊಮ್ಮನಹಳ್ಳಿ: ಗುಂಡಿಗಳ ನಡುವೆ ರಸ್ತೆ!

• ಲಿಂಗರಾಜು

**ಬೊಮ್ಮನಹಳ್ಳಿ:** ಕಾಮಗಾರಿಗಳ ಸಲುವಾಗಿ ಅಲ್ಲಲ್ಲಿ ಅಗೆದ ರಸ್ತೆಗಳು, ವಾತಾವರಣದ ತುಂಬೆಲ್ಲಾ ದೂಳು. ಇದು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಿವಾಸಿಗಳ ನಿತ್ಯದ ಗೋಳು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಾವೇರಿ ನೀರು ಪೂರೈಕೆ ಕೊಳವೆಮಾರ್ಗ ಹಾಗೂ ಒಳಚರಂಡಿ ಕೊಳವೆಗಳ ಅಳವಡಿಕೆಗಾಗಿ ಜಲ ಮಂಡಳಿಯವರು ರಸ್ತೆಗಳನ್ನು ಅನೇಕ ಕಡೆ ಅಗೆದಿದ್ದಾರೆ. ನೆಲದಡಿಯಲ್ಲಿ ವಿದ್ಯುತ್ ಕೇಬಲ್‌ಗಳನ್ನು ಅಳವಡಿಸುವುದಕ್ಕೆ ಬೆಸ್ಕಾಂ ವತಿಯಿಂದಲೂ ರಸ್ತೆಗಳನ್ನು ಅಲ್ಲಲ್ಲಿ ಅಗೆಯಲಾಗಿದೆ. ಇದರಿಂದ ಈ ಪ್ರದೇಶದ ವಾತಾವರಣ ದೂಳುಮಯವಾಗಿದೆ. ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿದೆ ಎಂದು ದೂರುತ್ತಿದ್ದಾರೆ ಸಾರ್ವಜನಿಕರು.

ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ರಸ್ತೆಗಳನ್ನು ಅಗೆಯುವುದು ಅನಿವಾರ್ಯ. ಆದರೆ, ರಸ್ತೆ ಅಗೆಯುವುದಕ್ಕೆ ತೋರಿಸುವಷ್ಟೇ ಉತ್ಸಾಹವನ್ನು, ಗುಂಡಿ ಮುಚ್ಚುವ ವಿಚಾರದಲ್ಲೂ ತೋರಿಸಬೇಕಲ್ಲವೇ ಎಂಬುದು ಸ್ಥಳೀಯ ನಿವಾಸಿಗಳ ಪ್ರಶ್ನೆ.

ಅತಿ ಹೆಚ್ಚು ಸಂಚಾರ ದಟ್ಟಣೆ ಇರುವ, ಕಿರಿದಾದ ಬೇಗೂರು ರಸ್ತೆಯಲ್ಲಿ ಜಲಮಂಡಳಿಯು ಒಳಚರಂಡಿ ಮಾರ್ಗಕ್ಕಾಗಿ ರಸ್ತೆ ಅಗೆದಿದೆ. ಇಲ್ಲಿನ ರಸ್ತೆಗಳಲ್ಲಿ ಸಂಚರಿಸುವುದೇ ದುಸ್ಸರವಾಗಿಬಿಟ್ಟಿದೆ. ವಾಹನ ದಟ್ಟಣೆ ವಿಪರೀತ ಹೆಚ್ಚಾಗಿದೆ. ಜೊತೆಗೆ ದೂಳಿನ ಸಿಂಚನವೂ ಇಲ್ಲಿ ತಪ್ಪಿದ್ದಲ್ಲ.



ಗಾರ್ವೆಬಾವಿಪಾಳ್ಯದಲ್ಲಿ ಬೆಸ್ಕಾಂ ಕಾಮಗಾರಿ ಸಲುವಾಗಿ ರಸ್ತೆ ಅಗೆದಿರುವುದು

ಕೆಲ ಖಾಸಗಿ ಕಂಪನಿಗಳು ಆಪ್ಟಿಕ್ ಫೈಬರ್ ಕೇಬಲ್ (ಒಎಫ್‌ಸಿ) ಅಳವಡಿಕೆಗಾಗಿಯೂ ಅಲ್ಲಲ್ಲಿ ರಸ್ತೆ ಅಗೆದಿವೆ. ಕೆಲಸ ಮುಗಿಸಿದ ನಂತರ, ರಸ್ತೆಯನ್ನು ದುರಸ್ತಿಗೊಳಿಸದೆ ಹಾಗೇ ಬಿಟ್ಟಿವೆ ಎಂಬ ದೂರುಗಳೂ ಇವೆ. ಅನುಮತಿ ಪಡೆಯದೆಯೇ ರಸ್ತೆಗಳನ್ನು ಅಗೆದಿದ್ದರೂ ಅಂತಹ ಕಂಪನಿಗಳ ವಿರುದ್ಧ ಬಿಬಿಎಂಪಿ ಕ್ರಮಕೈಗೊಂಡಿಲ್ಲ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಲೂ ಮುಂದಾಗಿಲ್ಲ ಎನ್ನುತ್ತಾರೆ ಸ್ಥಳೀಯರು.

'ರಸ್ತೆ ಗುಂಡಿಗಳನ್ನು ಮುಚ್ಚಿ ಎಂದು ಬಿಬಿಎಂಪಿಗೆ ಹೈಕೋರ್ಟ್ ಪದೇ ಪದೇ ತಾಕೀತು ಮಾಡುತ್ತಲೇ ಇದೆ. ಇನ್ನೊಂದೆಡೆ ರಸ್ತೆಗಳನ್ನು ಅಗೆದು, ಹಾಗೆ ಬಿಟ್ಟು ಹೋಗುವ ಪರಿಪಾಟ ಹೆಚ್ಚಾಗುತ್ತಲೇ ಸಾಗುತ್ತಿದೆ. ಇದು ದುರದೃಷ್ಟಕರ' ಎನ್ನುತ್ತಾರೆ ಗಾರ್ವೆಬಾವಿಪಾಳ್ಯ ನಿವಾಸಿ ಕನಕರಾಜ್.

'ಒಳಚರಂಡಿ ಕೊಳವೆ ಅಳವಡಿಕೆಗಾಗಿ ರಸ್ತೆ ಅಗೆದರು. ಕಾಮಗಾರಿ ಮುಗಿದರೂ ರಸ್ತೆಗಳನ್ನು ಇನ್ನೂ ಸರಿಪಡಿಸಿಲ್ಲ. ಇದರಿಂದಾಗಿ ಮನೆಯೊಳಗೆ ದೂಳು ತುಂಬಿಕೊಳ್ಳುತ್ತಿದೆ. ರಸ್ತೆಯನ್ನು ಆದಷ್ಟು ಬೇಗ ದುರಸ್ತಿ ಮಾಡಿದರೆ ನಾವು ತುಸು ನೆಮ್ಮದಿಯಿಂದ ಉಸಿರಾಡಬಹುದು' ಎನ್ನುತ್ತಾರೆ ಚಿಕ್ಕಬೇಗೂರು ಗೇಟ್ ನಿವಾಸಿ ಕೆ.ಸಿ.ಪ್ರತಾಪ್.

'ಕಾಮಗಾರಿಗಾಗಿ ರಸ್ತೆ ಅಗೆಯುವ ಮುನ್ನವೇ ಬೆಸ್ಕಾಂ, ಜಲಮಂಡಳಿಯವರು ಬಿಬಿಎಂಪಿಯಿಂದ ಅನುಮತಿ ಪಡೆದುಕೊಳ್ಳುತ್ತಾರೆ. ರಸ್ತೆಯನ್ನು ಮತ್ತೆ ಮೊದಲಿನ ಸ್ಥಿತಿಗೆ ತರುವ ವೆಚ್ಚವನ್ನೂ ಅವರೇ ಭರಿಸುತ್ತಾರೆ. ಒಎಫ್‌ಸಿ ಅಳವಡಿಸಲು ರಸ್ತೆ ಅಗೆಯುವ ಮುನ್ನ ಖಾಸಗಿ ಕಂಪನಿಗಳು ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಬೇಕು. ಒಎಫ್‌ಸಿ ಅಳವಡಿಕೆಗೆ ರಸ್ತೆ ಅಗೆದರೆ ಅದನ್ನು ದುರಸ್ತಿಗೊಳಿಸುವ ಜವಾಬ್ದಾರಿಯೂ ಅವರದ್ದೇ ಆಗಿರುತ್ತದೆ' ಎನ್ನುತ್ತಾರೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಶಶಿಕುಮಾರ್.

ಈ ಕುರಿತು ಪ್ರತಿಕ್ರಿಯಿಸಿದ ಶಾಸಕ ಸತೀಶ್ ರೆಡ್ಡಿ, 'ಬೆಸ್ಕಾಂ ಹಾಗೂ ಜಲಮಂಡಳಿಯವರು ಕೈಗೊಂಡಿರುವ ಕಾಮಗಾರಿ ಇನ್ನೂ ಕೆಲವೆಡೆ ಪ್ರಗತಿಯಲ್ಲಿದೆ. ಎಲ್ಲ ಕಾಮಗಾರಿಗಳು ಪೂರ್ಣಗೊಂಡ ಕೂಡಲೇ ರಸ್ತೆ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುತ್ತೇವೆ' ಎಂದು ಭರವಸೆ ನೀಡಿದರು.

## ಬೊಮ್ಮನಹಳ್ಳಿ ಕ್ಷೇತ್ರ: ಜನಸ್ಪಂದನ 26ರಂದು

ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್

**ಬೆಂಗಳೂರು:** ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಇದೇ 26ರಂದು ಜೆ.ಪಿ. ನಗರ ಆರನೇ ಹಂತದ ಗಣೇಶ ದೇವಸ್ಥಾನ ಮೈದಾನದಲ್ಲಿ 'ಜನ ಸ್ಪಂದನ' ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಶಾಸಕ ಎಂ.ಸತೀಶ ರೆಡ್ಡಿ, ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

**ಕಾರ್ಯಕ್ರಮದ ಸ್ಥಳ:** ಗಣೇಶ ಮೈದಾನ, 186, ಪುಟ್ಟೇನಹಳ್ಳಿ ರಸ್ತೆ, ಕೆ.ಆರ್. ಬಡಾವಣೆ, ಜೆ.ಪಿ.ನಗರ ಆರನೇ ಹಂತ, ಬೆಂಗಳೂರು–78

**ಸಂಪರ್ಕ:** 9448528998

ಪ್ರಜಾವಾಣಿ

# ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

## ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಜ್ಞಾನಭಾರತಿ ವಾರ್ಡ್‌ನ ಹನುಮಂತರಾಯನ ಪಾಳ್ಯದಲ್ಲಿ ಒಳಚರಂಡಿ ಮತ್ತು ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅನೇಕ ತಿಂಗಳುಗಳ ಬಳಿಕವೂ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಇದರಿಂದ ಸ್ಥಳೀಯ ನಿವಾಸಿಗಳಿಗೆ ಬಹಳ ತೊಂದರೆಯಾಗಿದೆ.

ಚರಂಡಿ ಅಗೆದು ಬಿಟ್ಟಿರುವುದರಿಂದ ಮಕ್ಕಳು, ವೃದ್ಧರಿಗೆ ಅಪಾಯವಾಗಿ ಪರಿಣಮಿಸಿದೆ. ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿದರೆ, ಇಲ್ಲಿನ ನಿವಾಸಿಗಳು ನಿರಾತಂಕಗೊಳ್ಳಲಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ವೇಗ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.

**ಗಂಗಾಧರ್,** ಹನುಮಂತರಾಯನಪಾಳ್ಯ



ಹನುಮಂತರಾಯನ ಪಾಳ್ಯದಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿ

## ವ್ಯಾಯಾಮ ಉಪಕರಣ ದುರಸ್ತಿ ಮಾಡಿ

ಅರಕೆರೆ ಮೈಕೊ ಬಡಾವಣೆಯ 2ನೇ ಹಂತದ ಉದ್ಯಾನದಲ್ಲಿರುವ ವ್ಯಾಯಾಮದ ಉಪಕರಣಗಳು ಹಾಳಾಗಿ ಹಲವು ತಿಂಗಳುಗಳೇ ಕಳೆದಿವೆ. ಅವುಗಳನ್ನು ದುರಸ್ತಿ ಮಾಡುವ ಅಥವಾ ಬದಲಿಸುವ ಕೆಲಸಕ್ಕೆ ಯಾರೂ ಮುಂದಾಗಿಲ್ಲ. ಸಂಬಂಧಪಟ್ಟವರಿಗೆ ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ. ವ್ಯಾಯಾಮ ಮಾಡಲು ಉದ್ಯಾನಕ್ಕೆ ಬರುವವರಿಗೆ ಇದರಿಂದ ಬಹಳ ಅನಾನುಕೂಲವಾಗಿದೆ.

ಉದ್ಯಾನ ನಿರ್ಮಿಸುವ ಜೊತೆಗೆ ಅದರ ನಿರ್ವಹಣೆಯನ್ನೂ ಸಮರ್ಪಕವಾಗಿ ನಿಭಾಯಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿದರೆ, ಸಾರ್ವಜನಿಕರಿಗೆ ಅನುಕೂಲವಾಗಲಿದೆ.

**ಬಿ.ಎಂ.ನಾರಾಯಣಸ್ವಾಮಿ,** ಮೈಕೊ ಬಡಾವಣೆ



ಮೈಕೊ ಬಡಾವಣೆಯ ಉದ್ಯಾನದಲ್ಲಿರುವ ವ್ಯಾಯಾಮ ಉಪಕರಣ ಮುರಿದು ಬಿದ್ದಿರುವುದು.

## ರಸ್ತೆ ಮೇಲೆಯೇ ಹರಿಯುವ ಕೊಳಚೆ ನೀರು



ಚಿಕ್ಕಪೇಟೆಯ ಆಸ್ಪತ್ರೆ ರಸ್ತೆ ಕೊಳಚೆಮಯ

ಚಿಕ್ಕಪೇಟೆ ವ್ಯಾಪ್ತಿಯ ಆಸ್ಪತ್ರೆ ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಇದರಿಂದ ಕೊಳಚೆ ನೀರು ಬಿವಿಕೆ ಐಯ್ಯಂಗಾರ್ ರಸ್ತೆ ಕೂಡುವವರಿಗೂ ಹರಿಯುತ್ತಿದೆ. ಈ ಸಮಸ್ಯೆ ಉದ್ಭವಿಸಿ ಹಲವು ದಿನಗಳಾದರೂ ಈವರೆಗೂ ದುರಸ್ತಿ ಕೆಲಸ ಆಗಿಲ್ಲ.

ಇದು ಪ್ರಮುಖ ವಾಣಿಜ್ಯ ಪ್ರದೇಶವಾಗಿದ್ದು, ಈ ರಸ್ತೆಯಲ್ಲಿ ಜನಸಂದಣಿ ಹಾಗೂ ವಾಹನ ಸಂಚಾರ ಹೆಚ್ಚು. ರಸ್ತೆಯಲ್ಲಿರುವ ಗುಂಡಿಗಳಲ್ಲಿ ಕೊಳಚೆ ನೀರು ಸಂಗ್ರಹಗೊಂಡಿರುತ್ತದೆ. ವಾಹನಗಳ ಸಂಚಾರದ ವೇಳೆ ಕೊಳಚೆ ನೀರು ಪಾದಚಾರಿಗಳ ಮೇಲೆ ಚಿಮ್ಮುವ ದೃಶ್ಯಗಳು ಇಲ್ಲಿ ಸಾಮಾನ್ಯ.

ಈ ಬಗ್ಗೆ ಸ್ಥಳೀಯ ನಾಗರಿಕರು ಹಾಗೂ ವ್ಯಾಪಾರಿಗಳು ಜಲಮಂಡಳಿಗೆ ಹಲವು ಬಾರಿ ನೀಡಿದರೂ ಪ್ರಯೋಜನ ಆಗಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರು ಮೂಗು ಮುಚ್ಚಿ ಹೆಜ್ಜೆ ಹಾಕುತ್ತಿದ್ದಾರೆ. ಚರಂಡಿ ದುರಸ್ತಿ ಮಾಡಿ, ಕೊಳಚೆ ನೀರು ಸರಾಗವಾಗಿ ಹರಿಯುವಂತೆ ಮಾಡಲು ಕೂಡಲೇ ಕ್ರಮ ಕೈಗೊಳ್ಳಿ.

**ಶಿವಪ್ರಸಾದ್,** ಸ್ಥಳೀಯ

## ಹೆಚ್ಚುವರಿ ಕೌಂಟರ್‌ನಲ್ಲಿ ಸೇವೆ ನೀಡಿ

ನಾಗರಬಾವಿ ಅಂಚೆ ಕಚೇರಿಗೆ ಕೆಲಸದ ನಿಮಿತ್ತ ತೆರಳಿದ್ದೆ. ಅಲ್ಲಿದ್ದ ಸರತಿ ಸಾಲಿನಲ್ಲಿ ಬಹುಪಾಲು ವಯಸ್ಸಾದವರೇ ಇದ್ದರು. ವೃದ್ಧಾಪ್ಯ ವೇತನ, ವಿಧವಾ ವೇತನ ಪಡೆಯಲು ಅವರು ಬಂದಿದ್ದರು. ಅಂಗವಿಕಲರೊಬ್ಬರೂ ಇದ್ದರು. ಅಲ್ಲಿ ಒಂದೇ ಕೌಂಟರ್‌ನಲ್ಲಿ ಸೇವೆ ನೀಡಲಾಗುತ್ತಿತ್ತು. ಈ ಬಗ್ಗೆ ಕೇಳಿದ್ದಕ್ಕೆ ಒಂದೇ ಕೌಂಟರ್ ಇರುವುದಾಗಿ ಸಿಬ್ಬಂದಿ ಹೇಳಿದರು. ಅಲ್ಲಿ ಮತ್ತೊಂದು ಕೌಂಟರ್ ಇದ್ದರೂ ಸೇವೆ ಇರಲಿಲ್ಲ.

ಪ್ರತಿ ತಿಂಗಳ ಆರಂಭದ ವಾರ ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ ಬಟವಾಡೆ ಸಮಯ. ಆ ಸಮಯದಲ್ಲಿ ಹೆಚ್ಚುವರಿ ಕೌಂಟರ್ ತೆರೆದರೆ, ಸಾಲುಗಟ್ಟಿ ನಿಲ್ಲುವುದು ತಪ್ಪಲಿದೆ. ವಯಸ್ಸಾದವರಿಗೂ ಬಹಳ ಅನುಕೂಲವಾಗಲಿದೆ. ಸಿಬ್ಬಂದಿ ಕೊರತೆ ನೆಪದಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡುವುದು ಸರಿಯಲ್ಲ. ಸಿಬ್ಬಂದಿಯೂ ಜನರೊಂದಿಗೆ ಸೌಜನ್ಯವಾಗಿ ವರ್ತಿಸಬೇಕು.

**ತುಕಾರಾಂ,** ಮಲ್ಲತ್ತಹಳ್ಳಿ



ನಾಗರಬಾವಿ ಅಂಚೆ ಕಚೇರಿಯಲ್ಲಿ ಸರತಿ ಸಾಲು

## ಬಸ್ ಹತ್ತಲು ಸಮಸ್ಯೆ

ಕೆಂಗೇರಿ ಮತ್ತು ಅಂಬೇಡ್ಕರ್ ಕಾಲೇಜು ಕಡೆಗೆ ಹೋಗುವ ಬಿಎಂಟಿಸಿ ಬಸ್‌ಗಳು ಕೆಂಗುಂಟೆ ಸಿಗ್ನಲ್ ವೃತ್ತದ ಬಳಿ ನಿಲುಗಡೆ ನೀಡುತ್ತವೆ. ಆದರೆ, ಇಲ್ಲಿ ಸದಾ ವಾಹನಗಳ ಸಂಚಾರ ಹಾಗೂ ದಟ್ಟಣೆ ಇರುವುದರಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಬಸ್ ಹತ್ತುವಾಗ ಮತ್ತು ಇಳಿಯುವಾಗ ಪ್ರಯಾಸ ಪಡುತ್ತಾರೆ. ಕೆಲವರು ಬಸ್ ಹತ್ತುವ ಭರದಲ್ಲಿ ವಾಹನಗಳ ನಡುವೆ ಓಡಿ ಬರುತ್ತಾರೆ. ಪ್ರಯಾಣಿಕರ ಹಿತಕ್ಕಾಗಿ ಬಸ್‌ಗಳ ನಿಲುಗಡೆಗೆ ಸೂಕ್ತ ಮತ್ತು ವಿಶಾಲವಾದ ಜಾಗ ನಿಗದಿ ಮಾಡಿ.

**ಗೋವಿಂದರಾಜುಲು,** ನಾಗರಬಾವಿ

ಪ್ರಜಾವಾಣಿ

# ಕೋವಿಡ್: ವಾರದಲ್ಲಿ 908 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ನಿಯಂತ್ರಣಕ್ಕೆ ಬಂದಿದ್ದು, ವಾರದಲ್ಲಿ 908 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ಅವಧಿಯಲ್ಲಿ 1,547 ಮಂದಿ ಚೇತರಿಸಿಕೊಂಡಿದ್ದಾರೆ. ಕೊರೊನಾ ಸೋಂಕಿತರಲ್ಲಿ ಏಳು ದಿನಗಳಲ್ಲಿ 19 ಮಂದಿ ಮೃತಪಟ್ಟಿರುವುದು ಖಚಿತಪಟ್ಟಿದೆ. ಹೊಸ ಪ್ರಕರಣಗಳಿಗಿಂತ ಚೇತರಿಕೆ ಹೊಂದುವವರ ಸಂಖ್ಯೆ ಹೆಚ್ಚು-ತ್ತಿರುವುದರಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ 1,995ಕ್ಕೆ ಇಳಿಕೆಯಾಗಿದೆ.

ಕೋವಿಡ್ ಮೂರನೇ ಅಲೆಯಲ್ಲಿ ಪ್ರಕರಣಗಳು ಗರಿಷ್ಠ ಸಂಖ್ಯೆಗೆ ತಲುಪಿದಾಗ ಎರಡು ಲಕ್ಷದವರೆಗೆ ಏರಿಕೆ ಕಂಡಿದ್ದ ಪರೀಕ್ಷೆಗಳ ಸಂಖ್ಯೆ ಈಗ 27 ಸಾವಿರಕ್ಕೆ ಇಳಿಕೆಯಾಗಿದೆ. ರಾಜ್ಯದಲ್ಲಿ ಭಾನುವಾರ 109 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 0.39ಕ್ಕೆ ಇಳಿಕೆಯಾಗಿದೆ.

14 ಜಿಲ್ಲೆಗಳಲ್ಲಿ ಮಾತ್ರ ಹೊಸದಾಗಿ ಪ್ರಕರಣಗಳು ಪತ್ತೆಯಾಗಿದ್ದು, 13 ಜಿಲ್ಲೆಗಳಲ್ಲಿ ಈ ಸಂಖ್ಯೆ ಒಂದಂಕಿಯಲ್ಲಿದೆ. ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.44 ಲಕ್ಷಕ್ಕೆ ಏರಿಕೆಯಾಗಿದೆ.

**2 ಜಿಲ್ಲೆ ಕೋವಿಡ್ ಮುಕ್ತ:** ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 125 ಮಂದಿ ಸೇರಿದಂತೆ ರಾಜ್ಯದಲ್ಲಿ 143 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 39.02 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 1,995ಕ್ಕೆ ಇಳಿಕೆಯಾಗಿದೆ. ಕೊಪ್ಪಳ ಹಾಗೂ ಗದಗ ಜಿಲ್ಲೆ ಕೋವಿಡ್ ಮುಕ್ತವಾಗಿದೆ. ಯಾದಗಿರಿ, ವಿಜಯಪುರ ಸೇರಿದಂತೆ 16 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಬೆಂಗಳೂರಿನಲ್ಲಿ 1,706 ಸೋಂಕಿತರಿದ್ದಾರೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರು ಹಾಗೂ ಹಾಸನದಲ್ಲಿ ತಲಾ ಒಬ್ಬರು ಸಾವಿಗೀಡಾ-ಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 1.83 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,037ಕ್ಕೆ ಏರಿಕೆಯಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ



# ಮಾಸ್ಕ್ ಕಡ್ಡಾಯ ಬೇಡ

## ಕೇಂದ್ರ ಸರ್ಕಾರಕ್ಕೆ ಸಾಂಕ್ರಾಮಿಕ ರೋಗಗಳ ತಜ್ಞರಿಂದ ಸಲಹೆ
## ಭಾರತದಲ್ಲಿ 4ನೇ ಅಲೆ ತೀವ್ರವಾಗುವ ಸಾಧ್ಯತೆ ತುಂಬಾ ಕಡಿಮೆ
## ರೋಗಿಗಳು, ವೃದ್ಧರಿಗೆ ಮಾತ್ರ ಮಾಸ್ಕ್ ಕಡ್ಡಾಯ ಮಾಡಬಹುದು

• **ಪಿಟಿಐ** ನವದೆಹಲಿ

ಏಷ್ಯಾ ಹಾಗೂ ಯುರೋಪ್‌ನ ಕೆಲ ರಾಷ್ಟ್ರಗಳಲ್ಲಿ ಕೋವಿಡ್ ಸೋಂಕು ತೀವ್ರ ಪ್ರಮಾಣದಲ್ಲಿ ಹೆಚ್ಚುತ್ತಿರುವುದರಿಂದ ನಮ್ಮ ದೇಶದಲ್ಲೂ ರಾಜ್ಯಗಳು ಮತ್ತೆ ಕಟ್ಟೆಚ್ಚರ ವಹಿಸಬೇಕು ಹಾಗೂ ಟೆಸ್ಟಿಂಗ್ ಹೆಚ್ಚಿಸಬೇಕು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದ ಬೆನ್ನಲ್ಲೇ ದೇಶದ ಪ್ರಸಿದ್ಧ ಸಾಂಕ್ರಾಮಿಕ ರೋಗಗಳ ತಜ್ಞರು ಅದಕ್ಕೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



'ಎಲ್ಲೋ ಕೊರೋನಾ ಹೆಚ್ಚುತ್ತಿದೆ ಎಂದು ನಾವು ಆತಂಕದಲ್ಲಿ ಬದುಕುವ ಅಗತ್ಯವಿಲ್ಲ. ಮುಂದಿನ ಕೊರೋನಾ ಅಲೆಗಳು ಭಾರತೀಯರನ್ನು ತೀವ್ರವಾಗಿ ಬಾಧಿಸುವ ಸಾಧ್ಯತೆ ತೀರಾ ಕಡಿಮೆ. ಹೀಗಾಗಿ ನಿರ್ಬಂಧಗಳನ್ನು ಸಡಿಲಿಸಿ, ಮಾಸ್ಕ್ ಕಡ್ಡಾಯದ ನಿಯಮ ಕೂಡ ಕೈಬಿಡಬಹುದು' ಎಂದು ತಜ್ಞರು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

**ನೈಸರ್ಗಿಕ ರೋಗನಿರೋಧಕ ಶಕ್ತಿ, ವ್ಯಾಪಕ ಲಸಿಕೆ:** ಭಾರತದಲ್ಲಿ ಶೇ.80ರಿಂದ ಶೇ.90ರಷ್ಟು ಜನರಿಗೆ ಕೋವಿಡ್ ಬಂದು ಹೋಗಿದೆ. ಹೀಗಾಗಿ ಅವರಲ್ಲಿ ನೈಸರ್ಗಿಕವಾಗಿ ನಿರೋಧಕ ಶಕ್ತಿ ವೃದ್ಧಿಯಾಗಿದೆ. ಜೊತೆಗೆ ಬಹುತೇಕ ಎಲ್ಲರಿಗೂ ಲಸಿಕೆ ನೀಡಲಾಗಿದೆ. ಬೇರೆ ದೇಶಗಳನ್ನು ನೋಡಿ ನಮ್ಮಲ್ಲೂ ಹಾಗೇ ಆಗಬಹುದು ಎಂದು ಊಹೆ ಮಾಡಬಾರದು. ನಮ್ಮ ದೇಶದ ಸೋಂಕಿನ ಅಂಕಿಅಂಶಗಳನ್ನು ವಿಶ್ಲೇಷಿಸಿ ಕ್ರಮ ಕೈಗೊಳ್ಳಬೇಕು. ನಮ್ಮಲ್ಲಿ ಹೊಸ ಕೋವಿಡ್ ಅಲೆ ಬಂದರೆ ಅದು ತೀವ್ರವಾಗಿರುವ ಸಾಧ್ಯತೆ ತುಂಬಾ ಕಡಿಮೆಯಿದೆ. ಹೀಗಾಗಿ ಮಾಸ್ಕ್ ಕಡ್ಡಾಯ ನಿಯಮ ಕೈಬಿಟ್ಟು, ವೃದ್ಧರು, ರೋಗಿಗಳಿಗೆ ಮಾತ್ರ ಮಾಸ್ಕ್ ಧರಿಸಲು ಸಲಹೆ ನೀಡಿದರೆ ಸಾಕು ಎಂದು ತಜ್ಞರು ಹೇಳಿದ್ದಾರೆ.

➘ 6

### ಮಾಸ್ಕ್ ಬೇಡ ಎನ್ನಲು ತಜ್ಞರು ನೀಡಿದ ಕಾರಣಗಳು

- ದೇಶದ ಶೇ.90ರಷ್ಟು ಜನರಿಗೆ ಕೋವಿಡ್ ಬಂದು ಹೋಗಿದೆ. ಹೀಗಾಗಿ ಜನರಲ್ಲಿ ನೈಸರ್ಗಿಕವಾಗಿ ನಿರೋಧಕ ಶಕ್ತಿ ಬಂದಿದೆ
- ಭಾರತದಲ್ಲಿ ಬಹುತೇಕ ಜನರಿಗೆ ಲಸಿಕೆ ನೀಡಲಾಗಿದೆ.
- ಹೊಸ ಅಲೆ ಬಂದರೆ ತೀವ್ರವಾಗಿ ಬಾಧಿಸುವ ಸಾಧ್ಯತೆ ಕಡಿಮೆ
- ಬೇರೆ ದೇಶದಲ್ಲಿ ಕೇಸು ಹೆಚ್ಚಳವಾದರೆ ನಾವು ಹೆದರಬೇಕಿಲ್ಲ

### ದೇಶದಲ್ಲಿ ನಿನ್ನೆ ಕೇವಲ 1761 ಕೇಸ್

ನವದೆಹಲಿ: ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, ಭಾನುವಾರ ಮುಂಜಾನೆ 8 ಗಂಟೆಗೆ ಮುಕ್ತಾಯವಾದ 24 ಗಂಟೆಗಳ ಅವಧಿಯಲ್ಲಿ ಕೇವಲ 1761 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದು ಸುಮಾರು ಎರಡು ವರ್ಷಗಳಲ್ಲೇ ದಾಖಲಾದ ಸಾರ್ವಕಾಲಿಕ ಕನಿಷ್ಠ ಪ್ರಕರಣಗಳ ಸಂಖ್ಯೆಯಾಗಿದೆ. ಮೊದಲ ಅಲೆ ಆರಂಭವಾದ 2019ರ ಮಾರ್ಚ್ ನಂತರ 2000ಕ್ಕಿಂತ ಹೆಚ್ಚು ಪ್ರಕರಣ ನಿತ್ಯ ವರದಿಯಾಗುತ್ತಿದ್ದವು. ಈಗ ಸೋಂಕು 2000ಕ್ಕಿಂತ ಕೆಳಗೆ ಇಳಿದಿದ್ದು ಗಮನಾರ್ಹ. ಇದೇ ವೇಳೆ 127 ಸೋಂಕಿತರು ಸಾವಿಗೀಡಾಗಿದ್ದಾರೆ. ಸಕ್ರಿಯ ಸೋಂಕುಗಳ ಸಂಖ್ಯೆ 26,240ಕ್ಕೆ ಇಳಿಕೆಯಾಗಿದೆ.

## ಕೋವಿಶೀಲ್ಡ್ 2ನೇ ಡೋಸ್ ಅವಧಿ ಇಳಿಕೆಗೆ ಶಿಫಾರಸು

### 12–16 ವಾರದ ಬದಲು 8–16 ವಾರದ ನಡುವೆ ನೀಡಿ

ನವದೆಹಲಿ: ಕೋವಿಶೀಲ್ಡ್‌ನ 2ನೇ ಡೋಸ್ ನೀಡುವ ಅವಧಿಯನ್ನು ಕಡಿಮೆ ಮಾಡಲು ಲಸಿಕಾಕರಣದ ತಾಂತ್ರಿಕ ಸಲಹಾ ಸಮಿತಿಯು ಸರ್ಕಾರಕ್ಕೆ ಭಾನುವಾರ ಶಿಫಾರಸು ಮಾಡಿದೆ. ಕೋವಿಶೀಲ್ಡ್‌ನ ಮೊದಲನೇ ಡೋಸು ಪಡೆದ 8 ರಿಂದ 16ನೇ ವಾರದೊಳಗಾಗಿ ಎರಡನೇ ಡೋಸನ್ನು ನೀಡಬಹುದು ಎಂದು ತಿಳಿಸಿದೆ. ಪ್ರಸ್ತುತ ಭಾರತದಲ್ಲಿ ಕೋವಿಶೀಲ್ಡ್‌ನ ಮೊದಲನೇ ಡೋಸನ್ನು ಪಡೆದ 12–16 ವಾರಗಳ ನಂತರ 2ನೇ ಡೋಸನ್ನು ನೀಡಲಾಗುತ್ತದೆ. ಆದರೆ, 8ನೇ ವಾರದ ನಂತರ 2ನೇ ಡೋಸ್ ನೀಡಿದರೆ, 12 ವಾರದ ನಂತರ ನೀಡಿದಷ್ಟೇ ಪ್ರತಿಕಾಯ ಶಕ್ತಿ ಸೃಷ್ಟಿ ಆಗುವುದು ಕಂಡು ಬಂದಿದೆ. ಹೀಗಾಗಿ ಪರಿಷ್ಕೃತ ಶಿಫಾರಸು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.



➘ 6

# ಮಾಸ್ಕ್ ಕಡ್ಡಾಯ ಬೇಡ

↙ ಮೊದಲ ಪುಟದಿಂದ

**ಸದಾ ಭಯದಲ್ಲಿ ಬದುಕಬೇಕಿಲ್ಲ:** ಚೀನಾ, ಹಾಂಕಾಂಗ್, ವಿಯೆಟ್ನಾಂ, ದಕ್ಷಿಣ ಕೊರಿಯಾ ಹಾಗೂ ಯುರೋಪ್‌ನ ಕೆಲ ರಾಷ್ಟ್ರಗಳಲ್ಲಿ ಕೋವಿಡ್ ಏರಿಕೆಯಾದಾಕ್ಷಣ ನಮ್ಮಲ್ಲೂ ಏರಿಕೆ ಯಾಗಬೇಕು ಎಂದೇನಿಲ್ಲ. ಹೀಗಾಗಿ ರಾಜ್ಯಗಳು ನಿರ್ಬಂಧ ಸಡಿಲಿಸುತ್ತಿರುವ ಪ್ರಕ್ರಿಯೆ ಮುಂದು ವರೆಯಬೇಕು. ಸದಾಕಾಲ ನಾವು ಹೆದರಿಕೆಯಲ್ಲಿ ಬದುಕಲು ಸಾಧ್ಯವಿಲ್ಲ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್)ಯ ಹೆಚ್ಚುವರಿ ನಿರ್ದೇಶಕ ಡಾ.ಸಮೀರಣ್ ಪಾಂಡಾ ತಿಳಿಸಿದ್ದಾರೆ.

**ಮಾಸ್ಕ್ ಬೇಡ, ಲಸಿಕೆ ಇನ್ನಷ್ಟು ನೀಡಿ:** ದೆಹಲಿಯ ಏಮ್ಸ್‌ನ ಹಿರಿಯ ಸಾಂಕ್ರಾಮಿಕ ರೋಗಗಳ ತಜ್ಞ ಹಾಗೂ ಐಸಿಎಂಆರ್ ಸಹಯೋಗದ ಕೋವ್ಯಾಕ್ಸಿನ್ ಲಸಿಕೆ ಪ್ರಯೋಗದ ಉಸ್ತುವಾರಿಯಾಗಿರುವ ಡಾ.ಸಂಜಯ್ ರಾಯ್, ಹಿರಿಯ ಸಾಂಕ್ರಾಮಿಕ ರೋಗಗಳ ತಜ್ಞ ಹಾಗೂ ಸಾರ್ವಜನಿಕ ಆರೋಗ್ಯ ತಜ್ಞ ಡಾ.ಚಂದ್ರಕಾಂತ್ ಲಹಾರಿಯಾ, ಸಫ್ದರ್ ಜಂಗ್ ಆಸ್ಪತ್ರೆಯ ಕಮ್ಯುನಿಟಿ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ.ಜುಗಲ್ ಕಿಶೋರ್ ಮುಂತಾದವರು, 'ದೇಶದಲ್ಲಿ ಮಾಸ್ಕ್ ಕಡ್ಡಾಯದ ನಿಯಮ ಕೈಬಿಡಬೇಕು. ಗಂಭೀರ ಅನಾರೋಗ್ಯವುಳ್ಳವರು ಮತ್ತು ವೃದ್ಧರಿಗೆ ಮಾತ್ರ ಮಾಸ್ಕ್ ಧರಿಸಲು ಸಲಹೆ ನೀಡಬೇಕು. ಲಸಿಕಾಕರಣವನ್ನು ಹೆಚ್ಚಿಸಬೇಕು' ಎಂದು ಸಲಹೆ ನೀಡಿದ್ದಾರೆ.

# ಕೋವಿಶೀಲ್ಡ್ 2ನೇ ಡೋಸ್ ಅವಧಿ ಇಳಿಕೆಗೆ ಶಿಫಾರಸು

↙ ಮೊದಲ ಪುಟದಿಂದ

ಜಾಗತಿಕವಾಗಿ ಕೊರೊನಾ ಪ್ರಕರಣಗಳಲ್ಲಿ ಏರಿಕೆ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಇನ್ನೂ ಲಸಿಕೆ ಪಡೆಯದ 6 ರಿಂದ 7 ಕೋಟಿ ಜನರಿಗೆ ಶೀಘ್ರವಾಗಿ ಎರಡೂ ಡೋಸು ಲಸಿಕೆಯನ್ನು ನೀಡುವುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದೂ ಅವು ತಿಳಿಸಿವೆ.

**ಕೋವ್ಯಾಕ್ಸಿನ್ ಬದಲಿಲ್ಲ:** ಆದರೆ ಭಾರತ ಬಯೋಟೆಕ್‌ನ ಕೋವ್ಯಾಕ್ಸಿನ್ ಡೋಸುಗಳ ನಡುವಿನ ಅಂತರದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಕೋವ್ಯಾಕ್ಸಿನ್ ಮೊದಲನೇ ಡೋಸು ಪಡೆದ 28 ದಿನಗಳ ನಂತರ 2 ನೇ ಡೋಸನ್ನು ವಿತರಿಸಲಾಗುತ್ತದೆ.

# ಬಿಬಿಎಂಪಿ ಬಜೆಟ್‌ಗೆ ಬರೀ 28 ಜನರಿಂದ ಸಲಹೆಗಳು!



**ಬೆಂಗಳೂರು:** ಬಿಬಿಎಂಪಿ 2022–23ನೇ ಸಾಲಿನ ಆಯವ್ಯಯ ಮಂಡನೆಗೆ ಸಂಪ್ರದಾಯದಂತೆ ಸಾರ್ವಜನಿಕರಿಂದ ಸಲಹೆ ಕೇಳಲಾಗಿದ್ದು, ಕೇವಲ 28 ಜನರು ಮಾತ್ರ ಸಲಹೆ ನೀಡಿದ್ದಾರೆ.

ಫೆ.18ರಂದು ಪಾಲಿಕೆ ಕೇಂದ್ರ ಕಚೇರಿಯಲ್ಲಿ ಸಲಹಾ ಪೆಟ್ಟಿಗೆ ಇಡಲಾಗಿತ್ತು. ಜತೆಗೆ ಇ–ಮೇಲ್ ಮೂಲಕವು ಸಲಹೆ ನೀಡುವಂತೆ ಕೋರಲಾಗಿತ್ತು. ಕೇಂದ್ರ ಕಚೇರಿಯಲ್ಲಿ ಇಟ್ಟ ಪೆಟ್ಟಿಗೆಗೆ ಮೂರು ಸಲಹೆ ಬಂದಿವೆ. ಇನ್ನು ಇ ಮೇಲ್ ಮೂಲಕ 25 ಮಂದಿ ತಮ್ಮ ಸಲಹೆ ನೀಡಿದ್ದಾರೆ. ಈ ಮೂಲಕ ಪಾಲಿಕೆ ಬಜೆಟ್‌ಗೆ ಜನರಿಂದ ತೀವ್ರ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇನ್ನು ಜನಾಗ್ರಹ ಸಂಘಟನೆ ಪ್ರತಿವರ್ಷದಂತೆ ಈ ವರ್ಷವೂ 2022–23ನೇ ಸಾಲಿನ ಬಜೆಟ್ ಮಂಡನೆಗೆ 198 ವಾರ್ಡ್‌ಗಳಿಂದ ಸಲಹೆ ಸ್ವೀಕರಿಸುವ ಉದ್ದೇಶದಿಂದ 'ಮೈ ಸಿಟಿ–ಮೈ ಬಜೆಟ್' ಅಭಿಯಾನ ಆರಂಭಿಸಿತ್ತು. 198 ವಾರ್ಡ್‌ಗಳಿಂದ 2 ಸಾವಿರ ಜನರು ಪ್ರತಿಕ್ರಿಯಿಸಿ ಸಾರ್ವಜನಿಕ ಉದ್ಯಾನಗಳು, ಶೌಚಗೃಹ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಬಗ್ಗೆ ಸಲಹೆ ನೀಡಿದ್ದಾರೆ ಎಂದು ಜನಾಗ್ರಹ ಸಂಘಟನೆ ತಿಳಿಸಿದೆ.

# ಪಾಲಿಕೆ ಕಲ್ಯಾಣ ಕಾರ್ಯಕ್ರಮಕ್ಕೆ ಅರ್ಹರಿಂದ ಅರ್ಜಿ ಆಹ್ವಾನ

**ಬೆಂಗಳೂರು:** ಬಿಬಿಎಂಪಿಯ 2021–22ನೇ ಸಾಲಿನ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು ಹಾಗೂ ಸಾಮಾನ್ಯ ವರ್ಗ, ತೃತೀಯ ಲಿಂಗಿಗಳ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಬಿಬಿಎಂಪಿ ವೆಬ್‌ಸೈಟ್ **https://site.bbmp.gov.in/departmentwebsites/welfare/welfareactivities.html** ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ವಲಯದ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಚೇರಿಯ ಇ–ಮೇಲ್ ವಿಳಾಸ **welfarebbmp@gmail.com** ಗೆ ಸಂಪರ್ಕಿಸುವುದು ಮತ್ತು ವಲಯದ ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ಅವರ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

### ಪಾದಚಾರಿಗಳ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ಸೈಕಲ್ ಪ್ರಿಯರ ಆಗ್ರಹ

# ಪಾದಚಾರಿ ಸ್ನೇಹಿ ಮಾರ್ಗಕ್ಕೆ ಬೇಡಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ವಾರಾಂತ್ಯದಲ್ಲಿ ಚರ್ಚ್ ಸ್ಟ್ರೀಟ್‌ನಲ್ಲಿ ವಾಹನಗಳ ಸಂಚಾರ ನಿಷೇಧ ಕ್ರಮವು ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಇದೀಗ ಬೆಂಗಳೂರಿನಾದ್ಯಂತ ಪಾದಚಾರಿ ಸ್ನೇಹಿ ರಸ್ತೆಗಳಿಗೆ ಬೇಡಿಕೆ ಹೆಚ್ಚುತ್ತಿದೆ.

ಈ ಬಗ್ಗೆ ಅಧಿಕಾರಿಗಳು ಇನ್ನೂ ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೂ, ಅನೇಕ ಬೆಂಗಳೂರಿಗರು ಈಗಾಗಲೇ ಈ ನಿಟ್ಟಿನಲ್ಲಿ ಕಾರ್ಯಮಗ್ನರಾಗಿದ್ದಾರೆ.

ಪಾದಚಾರಿಗಳು ಮತ್ತು ಸೈಕ್ಲಿಸ್ಟ್‌ಗಳಿಗೆ ಸುರಕ್ಷತೆ ಮತ್ತು ಅನುಕೂಲಕರ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಸ್ಥಳೀಯ ನಿವಾಸಿಗಳ ಸಹಾಯದಿಂದ ಸಂಚಾರ ದಟ್ಟಣೆ ಕಡಿಮೆ ಇರುವ ರಸ್ತೆಗಳನ್ನು ಗುರುತಿಸುವ ಕಾರ್ಯದಲ್ಲಿ ಸ್ವಯಂ ಸೇವಕರು ತೊಡಗಿದ್ದಾರೆ. ಇದು ಮುಖ್ಯ ರಸ್ತೆಗಳು ಅಥವಾ ಸಂಚಾರ ದಟ್ಟಣೆಯ ರಸ್ತೆಗಳನ್ನು ತಪ್ಪಿಸಲು ಪಾದಚಾರಿಗಳು ಮತ್ತು ಸೈಕ್ಲಿಸ್ಟ್‌ಗಳಿಗೆ ಪರ್ಯಾಯ ಮಾರ್ಗವನ್ನು ಒದಗಿಸುತ್ತದೆ. ಹತ್ತಿರದ ಶಾಲೆಗಳು ಅಥವಾ ಸಾರ್ವಜನಿಕ ಉದ್ಯಾನವನಗಳಿಗೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ರಸ್ತೆಗಳನ್ನು ಗುರುತಿಸಲಾಗುತ್ತಿದೆ. ಇದರಿಂದ ನಾಗರಿಕರು ದೈನಂದಿನ ವ್ಯಾಯಾಮಕ್ಕಾಗಿ ಈ ಮಾರ್ಗಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

''ನಾವು ವಸತಿ ಪ್ರದೇಶಗಳಲ್ಲಿ 'ಪಾದಚಾರಿ ಸ್ನೇಹಿ ರಸ್ತೆಗಳನ್ನು' ಗುರುತಿಸುವ ಕಾರ್ಯವನ್ನು ಪ್ರಾರಂಭಿಸಿದ್ದೇವೆ. ಮುಂದಿನ ಹಂತದಲ್ಲಿ ಪಾದಚಾರಿಗಳು ಮತ್ತು ಸೈಕ್ಲಿಸ್ಟ್‌ಗಳಿಗೆ ಸುರಕ್ಷಿತ ಭಾವನೆ ಮೂಡಿಸಲು ಸೈನ್ ಬೋರ್ಡ್‌ಗಳನ್ನು ಹಾಕಲು ಮತ್ತು ಇತರ ಉಪಕ್ರಮಗಳನ್ನು ಕೈಗೊಳ್ಳಲು ಯೋಚಿಸುತ್ತಿದ್ದೇವೆ. ಸೈಕಲ್ ಪಥಗಳು ಪ್ರಮುಖವಾಗಿ ಮುಖ್ಯ ರಸ್ತೆಗಳಲ್ಲಿರುವುದರಿಂದ ಉಪ ರಸ್ತೆಗಳಲ್ಲಿ ಪರ್ಯಾಯ ಸೈಕಲ್ ಪಥಗಳನ್ನು ರಚಿಸಬಹುದು,'' ಎಂದು ಬೆಂಗಳೂರು ಬೈಸಿಕಲ್ ಮೇಯರ್ ಸತ್ಯಶಂಕರನ್ ಹೇಳಿದರು.



**ವಾರಾಂತ್ಯದಲ್ಲಿ ಚರ್ಚ್ ಸ್ಟ್ರೀಟ್‌ನಲ್ಲಿ ವಾಹನಗಳ ಸಂಚಾರ ನಿಷೇಧ**

**ಸಂಚಾರ ದಟ್ಟಣೆ ಕಡಿಮೆ ಇರುವ ಪ್ರದೇಶಗಳ ಗುರುತಿಸುವಿಕೆ ಕಾರ್ಯ ಚುರುಕು**

ವಿಜ್ಞಾನ ತಂತ್ರಜ್ಞಾನ ಮತ್ತು ನೀತಿ ಅಧ್ಯಯನ ಕೇಂದ್ರ(ಸಿಎಸ್‌ಟಿಇಪಿ)ವು ಇತ್ತೀಚೆಗೆ ನಡೆಸಿದ ಅಧ್ಯಯನದ ಪ್ರಕಾರ, ಬೆಂಗಳೂರಿನಲ್ಲಿ ಶೇ.68ಕ್ಕಿಂತ ಹೆಚ್ಚು ಮಾಲಿನ್ಯ ಹೊರಸೂಸುವಿಕೆ ಮೋಟಾರು ವಾಹನಗಳಿಂದ ಆಗುತ್ತಿದೆ. ವಾಹನಗಳ ಮೇಲಿನ ಅತಿಯಾದ ಅವಲಂಬನೆಯನ್ನು ಬದಲಾಯಿಸುವ ಅಗತ್ಯವನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಸಿಎಸ್‌ಟಿಇಪಿ ಈ ವರದಿಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ(ಕೆಎಸ್‌ಪಿಸಿಬಿ) ಮತ್ತು ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ.

ಮೋಟಾರು ವಾಹನಗಳ ಬದಲಾಗಿ ಸಾಧ್ಯವಾದಷ್ಟು ಸೈಕಲ್‌ಗಳನ್ನು ಬಳಸಿ, ಈ ಮೂಲಕ ನಗರದ ವಾತಾವರಣವನ್ನು ಕಾಪಾಡಲು ಬಹುತೇಕ ವಯಸ್ಕರು ಪ್ರಯತ್ನಿಸುತ್ತಿದ್ದಾರೆ. ಯುವಕರು ಕೂಡ ಈ ನಿಟ್ಟಿನಲ್ಲಿ ಸಂಕಲ್ಪ ತೊಟ್ಟು ವಾಯು ಮಾಲಿನ್ಯ ಕಡಿಮೆಗೊಳಿಸುವ ಕಾರ್ಯದಲ್ಲಿ ನಿರತವಾಗಬೇಕಿದೆ. ಈ ಕ್ರಮದಲ್ಲಿ ಶಾಲೆ ಮತ್ತು ಕಾಲೇಜುಗಳು ದೊಡ್ಡ ಪಾತ್ರ ವಹಿಸುತ್ತವೆ ಎಂದು ಕೌನ್ಸಿಲ್ ಫಾರ್ ಆಕ್ಟೀವ್ ಮೊಬಿಲಿಟಿ(ಸಿಎಫ್‌ಎಎಂ) ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ.

''ಮುಖ್ಯ ರಸ್ತೆಗಳಿಂದ ದೂರದಲ್ಲಿರುವ ಹಾಗೂ ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಶಾಲೆಗಳನ್ನು ಸಂಪರ್ಕಿಸುವ ನೆರೆಹೊರೆಯ ಶಾಂತ ರಸ್ತೆಗಳನ್ನು ಗುರುತಿಸಲಾಗುತ್ತಿದೆ. ಇದಕ್ಕಾಗಿ ಸ್ವಯಂಸೇವಕರು, ಸ್ಥಳೀಯ ನಿವಾಸಿಗಳಿಂದ ಸಹಿ ಸಂಗ್ರಹಿಸಲಾಗುವುದು,'' ಎಂದು ಸತ್ಯಶಂಕರನ್ ತಿಳಿಸಿದರು.

VK ವಿಜಯ ಕರ್ನಾಟಕ



# ಮಾಸ್ಕ್ ಧಾರಣೆ ನಿಯಮ ಸಡಿಲಿಕೆ?

**ಹೊಸದಿಲ್ಲಿ:** ಚೀನಾ, ಯುರೋಪ್‌ನಲ್ಲಿ ಕೊರೊನಾ ಸೋಂಕಿನ ಹೊಸ ಅಲೆಯು ನಿಧಾನವಾಗಿ ಏಳುವ ಲಕ್ಷಣಗಳು ಗೋಚರವಾಗುತ್ತಿದ್ದರೂ ಭಾರತದಲ್ಲಿ ಮಾತ್ರ ಮುಂಬರುವ ಕೊರೊನಾ ಅಲೆಗಳು ಗಂಭೀರ ಪರಿಣಾಮ ಬೀರುವುದಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ''ದೇಶದಲ್ಲಿ 100 ಕೋಟಿಗೂ ಹೆಚ್ಚು ಡೋಸ್ ಕೊರೊನಾ ನಿರೋಧಕ ಲಸಿಕೆಯನ್ನು ಜನರು ಪಡೆದಿರುವ ಕಾರಣ ವೈರಾಣು ವಿರುದ್ಧ ದೇಹದಲ್ಲಿ ನೈಸರ್ಗಿಕವಾಗಿ ರೋಗನಿರೋಧಕತೆ ವೃದ್ಧಿಯಾಗಿದೆ. ಹಾಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯ ಮಾಸ್ಕ್ ಧಾರಣೆಯ ನಿಯಮಗಳನ್ನು ನಿಧಾನವಾಗಿ ಸಡಿಲಿಸಬಹುದು,'' ಎಂದೂ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಭಾನುವಾರ ಬೆಳಗ್ಗೆ 8 ಗಂಟೆಗೆ ಕೊನೆಯಾದ 24 ಗಂಟೆ ಅವಧಿಯಲ್ಲಿ ಸೋಂಕಿನ 1,761 ಹೊಸ ಪ್ರಕರಣಗಳು ವರದಿಯಾಗಿವೆ. ಇದು ಕಳೆದ 688 ದಿನಗಳಲ್ಲೇ ಕನಿಷ್ಠ ಸಂಖ್ಯೆಯಾಗಿದೆ. ಜತೆಗೆ ಸಕ್ರಿಯ ಸೋಂಕಿತರ ಸಂಖ್ಯೆ 26,240 ಇದ್ದು, ಬಹುತೇಕರು ಸೌಮ್ಯ ರೋಗ ಲಕ್ಷಣಗಳಿಂದ ಬಳಲುತ್ತಿದ್ದಾರೆ. ಸಾವಿನ ಪ್ರಮಾಣ ಕೂಡ ಇಳಿದಿರುವ ಕಾರಣ , ಮುಂದಿನ ದಿನಗಳಲ್ಲಿ ಕೊರೊನಾ ವೈರಾಣು ರಚನೆ ಮಾರ್ಪಡಿಸಿಕೊಂಡು ದಾಳಿ ಇಟ್ಟರೂ ಕೂಡ ಎರಡನೇ ಅಲೆಯಲ್ಲಿನ ಆದಷ್ಟು ಗಂಭೀರ ಪರಿಣಾಮ ಬೀರಲಾಗಲ್ಲ ಎಂದು ಏಮ್ಸ್‌ನ ಹಿರಿಯ ವೈರಾಣು ತಜ್ಞವೈದ್ಯ ಡಾ. ಸಂಜಯ್ ರಾಯ್ ತಿಳಿಸಿದ್ದಾರೆ.

''ದೇಶದಲ್ಲಿ ಕೊರೊನಾ ವೈರಾಣು 1000 ಬಾರಿ ರಚನೆ ಮಾರ್ಪಡಿಸಿಕೊಂಡಿದೆ. ಆದರೆ ಗಮನಕ್ಕೆ ಬಂದಿದ್ದು ಐದು ರೂಪಾಂತರಿಗಳು ಮಾತ್ರ. ಆ ಪೈಕಿ ಒಂದು ಅಥವಾ ಎರಡು ಮಾತ್ರ ಮಾರಣಾಂತಿಕ ಎನಿಸಿವೆ. ಸದ್ಯಕ್ಕೆ ಕೊರೊನಾ ಲಸಿಕಾ ಅಭಿಯಾನದ ಅಡಿಯಲ್ಲಿ ದೇಶದ ಮೂಲೆಮೂಲೆಗಳಲ್ಲೂ ಒಂದು ಅಥವಾ ಎರಡೂ ಡೋಸ್ ಲಸಿಕೆ ನೀಡಲಾಗಿದೆ. ಇದರಿಂದ ಜನರಲ್ಲಿ ಕೊರೊನಾ ವಿರುದ್ಧ ಹೋರಾಡುವ ಪ್ರತಿಕಾಯಗಳು ವೃದ್ಧಿಯಾಗಿವೆ. ಹಾಗಾಗಿ ಶ್ವಾಸಕೋಶದ ತೀವ್ರ ಸೋಂಕು, ಉಸಿರಾಟದ ತೀವ್ರ ಸಮಸ್ಯೆಯಿಂದ ಜನರು ಸಾಯುವುದು ತಗ್ಗಲಿದೆ. ಭವಿಷ್ಯದ ರೂಪಾಂತರಿಗಳು, 4 ಅಥವಾ 5ನೇ ಅಲೆಗಳ ಮೇಲೆ ನಿಗಾ ಇಟ್ಟಿದ್ದರೆ ಸಾಕು. ಮುನ್ನೆಚ್ಚರಿಕೆ ಕ್ರಮಗಳಲ್ಲಿ ಸುಧಾರಣೆಯಾಗಲಿ,'' ಎಂದು ಅವರು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಸಲಹೆ ನೀಡಿದ್ದಾರೆ.

**80-90% ಜನಸಂಖ್ಯೆ ಚೇತರಿಕೆ:** ಕಳೆದ ಮೂರೂ ಅಲೆಗಳಿಂದ ದೇಶದ ಸುಮಾರು 90% ಜನರು ಕೊರೊನಾದ ವಿವಿಧ ರೂಪಾಂತರಿಗಳ ಸೋಂಕಿಗೆ ತುತ್ತಾಗಿ , ಚೇತರಿಕೆಯನ್ನೂ ಕಂಡಾಗಿದೆ. ಜತೆಗೆ, ಕೊರೊನಾ ನಿರೋಧಕ ಲಸಿಕೆ ಕೂಡ ಪಡೆದಿದ್ದಾರೆ. ಇದು ಮುಂಬರುವ ರೂಪಾಂತರಿಗಳು ಸೋಂಕಿತರ ಅಂಗಾಂಗಳ ನಾಶಕ್ಕೆ ಯತ್ನಿಸಿದರೂ ತಡೆಯುವಷ್ಟು ಪ್ರಭಾವಿ ಪ್ರತಿಕಾಯಗಳನ್ನು ಜನರಲ್ಲಿ ವೃದ್ಧಿಸುವಂತೆ ಮಾಡಿದೆ. ಹಾಗಾಗಿ ಮಾಸ್ಕ್‌ಗಳ ಬಳಕೆಯನ್ನು ತಗ್ಗಿಸಬಹುದು. ರೋಗಲಕ್ಷಣ ಇರುವವರು ಮಾತ್ರವೇ ಮಾಸ್ಕ್ ಧರಿಸಿಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡಿದರೆ ಉತ್ತಮ ನಡೆ ಎನಿಸಲಿದೆ ಎಂದು ಸಫ್ದರ್‌ಜಂಗ್ ಆಸ್ಪತ್ರೆಯ ಸಾಮುದಾಯಿಕ ಔಷಧ ವಿಭಾಗದ ಮುಖ್ಯಸ್ಥ ಡಾ. ಜುಗಲ್ ಕಿಶೋರ್ ಅಭಿಪ್ರಾಯಪಟ್ಟಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ



# ಬಜೆಟ್ ಸಲಹೆಗೆ ನೀರಸ ಪ್ರತಿಕ್ರಿಯೆ

**ಬೆಂಗಳೂರು:** 2022-23ನೇ ಸಾಲಿನ ಬಿಬಿಎಂಪಿ ಆಯವ್ಯಯ ಮಂಡನೆಗೂ ಮುನ್ನ ಸಲಹೆ- ಸೂಚನೆ ಸಂಬಂಧ ಸಾರ್ವ ಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.



ಬಜೆಟ್‌ನಲ್ಲಿ ಅನುದಾನವನ್ನು ಹಂಚಿಕೆ ಮಾಡುವ ಮುನ್ನ ತೆರಿಗೆ ಪಾವತಿಸುವ ಸಾರ್ವಜನಿಕರಿಂದಲೂ ಸಲಹೆ ಕೇಳುವ ಸಂಪ್ರದಾಯವನ್ನು ಕೆಲವು ವರ್ಷಗಳಿಂದ ಬಿಬಿಎಂಪಿ ರೂಢಿಸಿಕೊಂಡು ಬಂದಿದೆ. ಹೀಗಾಗಿ, ಬಜೆಟ್ ಸಿದ್ಧತೆಗೂ ಮುನ್ನ ಫೆ.18ರಂದು ಪಾಲಿಕೆ ಕೇಂದ್ರ ಕಚೇರಿಯಲ್ಲಿ ಸಲಹಾ ಪೆಟ್ಟಿಗೆ ಇಡಲಾಗಿತ್ತು. ಈ ಪೆಟ್ಟಿಗೆಗೆ ಕೇವಲ 3 ಜನರು ಮಾತ್ರ ಪತ್ರದ ಮೂಲಕ ಸಲಹೆ ನೀಡಿದ್ದಾರೆ. ಕೇವಲ 25ಕ್ಕೂ ಕಡಿಮೆ ಜನರು ಇ-ಮೇಲ್ ಮಾಡಿದ್ದಾರೆ.

ಪ್ರತಿ ವರ್ಷ ಬಿಬಿಎಂಪಿ ಬಜೆಟ್ ವೇಳೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆದು ಪಾಲಿಕೆಗೆ ನೀಡುವ ಕಾರ್ಯವನ್ನು ಜನಾಗ್ರಹ ಸಂಘಟನೆ ಮಾಡುತ್ತಿದೆ. ಪ್ರಸ್ತುತ 2022-23ನೇ ಸಾಲಿನ ಬಜೆಟ್ ಮಂಡನೆಗೆ 198 ವಾರ್ಡ್‌ಗಳಿಂದ ಸಲಹೆ ಸ್ವೀಕರಿಸುವ ಉದ್ದೇಶದಿಂದ 'ಮೈ ಸಿಟಿ-ಮೈ ಬಜೆಟ್' ಅಭಿಯಾನ ಆರಂಭಿಸಿತ್ತು. ಜನರಿಂದ ಉತ್ತಮ ಸಲಹೆ ಸಿಗದ ಹಿನ್ನೆಲೆಯಲ್ಲಿ ದಿನಾಂಕವನ್ನು ಮಾ.20ರವರೆಗೆ ವಿಸ್ತರಣೆ ಮಾಡಿತ್ತು. ಅಭಿಯಾನದಲ್ಲಿ ಮಾ.19ರ ಅಂತ್ಯಕ್ಕೆ 198 ವಾರ್ಡ್‌ಗಳಿಂದ 2 ಸಾವಿರ ಜನರು ಪ್ರತಿಕ್ರಿಯಿಸಿ ಸಾರ್ವಜನಿಕ ಉದ್ಯಾನಗಳು, ಶೌಚಗೃಹ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಬಗ್ಗೆ ಸಲಹೆ ನೀಡಿದ್ದಾರೆ ಎಂದು ಜನಾಗ್ರಹ ಸಂಘಟನೆ ಸದಸ್ಯರು 'ವಿಜಯವಾಣಿ'ಗೆ ತಿಳಿಸಿದ್ದಾರೆ.

# ಮಳೆಗೆ 3 ಮರ ಧರೆಗೆ

**ಬೆಂಗಳೂರು:** ನಗರದಲ್ಲಿ ಭಾನುವಾರ ರಾತ್ರಿ ವಿವಿಧೆಡೆ ಮಳೆಯಾಗಿ 3 ಮರ ಬಿದ್ದಿದೆ. ನ್ಯೂ ಬಿಇಎಲ್ ರಸ್ತೆ ಮತ್ತು ಹೆಬ್ಬಾಳ ಮೇಲ್ಸೇತುವೆ ಕೆಳಗಿನ ಸರ್ವೀಸ್ ರಸ್ತೆಯಲ್ಲಿ ಮೊಣಕಾಲುದ್ದ ನೀರು ನಿಂತುಕೊಂಡು ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ವಾಯುಭಾರ ಕುಸಿತದಿಂದ ರಾಜ್ಯದ ವಿವಿಧೆಡೆ ಕಳೆದ 3 ದಿನಗಳಿಂದ ಮಳೆಯಾಗುತ್ತಿದೆ. ಬೆಂಗಳೂರಿನಲ್ಲಿ ಶನಿವಾರ ರಾತ್ರಿ ತುಂತುರು ಮಳೆಯಾಗಿತ್ತು. ಭಾನುವಾರ ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಇತ್ತು. ತೀವ್ರ ಗಾಳಿಯಿಂದಾಗಿ ಹೊಂಬೇಗೌಡನಗರ, ಜೆ.ಪಿ. ನಗರ 5ನೇ ಹಂತ ಹಾಗೂ ಕೊಡಿಗೇಹಳ್ಳಿ ಬಳಿ ಒಂದೊಂದು ಮರ ಬಿದ್ದಿದೆ. ಮಳೆ ಪರಿಣಾಮ ನ್ಯೂ ಬಿಇಎಲ್ ರಸ್ತೆ ಮತ್ತು ಹೆಬ್ಬಾಳ ಮೇಲ್ಸೇತುವೆಯ ಕೆಳಗಿನ ಸರ್ವೀಸ್ ರಸ್ತೆಯಲ್ಲಿ ನೀರು ನಿಂತು ಸವಾರರು ಪರದಾಡಿದರು.

**» ಹಲವೆಡೆ ವಾಹನ ದಟ್ಟಣೆ**

ವಿಜಯವಾಣಿ
ಕನ್ನಡಿಗರ ಧ್ವನಿ



### ಕಡ್ಡಾಯ ಮಾಸ್ಕ್ ನಿಯಮ ತೆರವಿಗೆ ತಜ್ಞರ ಸಲಹೆ | ಲಸಿಕೆ ನೀಡಿಕೆ, ರೋಗನಿರೋಧಕತೆ ಹೆಚ್ಚಳ

# ನಾಲ್ಕನೇ ಅಲೆಯಿಂದ ಭಾರತದಲ್ಲಿ ಗಂಭೀರ ಪರಿಣಾಮವಿಲ್ಲ

**ನವದೆಹಲಿ:** ಆಗ್ನೇಯ ಏಷ್ಯಾ ಮತ್ತು ಯುರೋಪ್‌ನ ಕೆಲ ಭಾಗಗಳಲ್ಲಿ ಕೋವಿಡ್ ಸೋಂಕು ಮತ್ತೆ ಅಬ್ಬರಿಸುತ್ತಿದ್ದು ಕಳವಳ ಸೃಷ್ಟಿಸಿರುವುದರ ನಡುವೆ ಭಾರತದಲ್ಲಿ ಹೊಸ ಅಲೆ ಅಪ್ಪಳಿಸಿದರೂ ಗಂಭೀರ ಪರಿಣಾಮ ಬೀರದು ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಕಡ್ಡಾಯ ಮಾಸ್ಕ್ ಧಾರಣೆ ನಿಯಮವನ್ನು ಸಡಿಲಿಸಲೂ ಕೆಲವರು ಸಲಹೆ ಮಾಡಿದ್ದಾರೆ. ನೈಸರ್ಗಿಕ ಸೋಂಕಿನ ಕಾರಣದಿಂದ ರೋಗನಿರೋಧಕತೆ (ಇಮ್ಯುನಿಟಿ) ಹೆಚ್ಚಳ ಮತ್ತು ಅಧಿಕ ಲಸಿಕೆ ನೀಡಿಕೆಯಿಂದಾಗಿ ದೇಶದಲ್ಲಿ ಮುಂದೆ ಕರೊನಾ ಅಲೆ ಅಪ್ಪಳಿಸಿದರೂ ಅದು ದೊಡ್ಡ ರೀತಿಯಲ್ಲಿ ಪರಿಣಾಮ ಬೀರದು ಎನ್ನುವುದು ತಜ್ಞರ ಅಭಿಮತವಾಗಿದೆ.

ಸೋಂಕಿನ ಹೊಸ ಪ್ರಕರಣಗಳು ಹಾಗೂ ಸಾವಿನ ಪ್ರಮಾಣ ಕ್ಷೀಣಿಸಿರುವುದರಿಂದ ಕಡ್ಡಾಯ ಮಾಸ್ಕ್ ನಿಯಮವನ್ನು ಸಡಿಲಿಸುವುದನ್ನೂ ಸರ್ಕಾರ ಪರಿಶೀಲಿಸಬಹುದು ಎನ್ನುವುದು ಅವರ ಸಲಹೆಯಾಗಿದೆ. ಸಾರ್ಸ್-ಸಿಒವಿ-2 ಆರ್‌ಎನ್‌ಎ ವೈರಸ್ ಆಗಿದ್ದು ರೂಪಾಂತರಗೊಳ್ಳುತ್ತಲೇ ಇರುತ್ತದೆ. ಈಗಾಗಲೇ 1,000ಕ್ಕೂ ಅಧಿಕ ರೂಪಾಂತರವಾಗಿದ್ದು ಅದರಲ್ಲಿ ಐದು ಪ್ರಭೇದಗಳು ಮಾತ್ರವೇ ಕಳವಳಕಾರಿಯಾದುದು ಎಂದು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಏಮ್ಸ್) ಹಿರಿಯ ಸಾಂಕ್ರಾಮಿಕ ರೋಗ ತಜ್ಞ ಸಂಜಯ್ ರಾಯ್ ಹೇಳಿದ್ದಾರೆ. ಹೊಸ ತಳಿ ಹುಟ್ಟಿಕೊಂಡರೂ ಭಾರತದಲ್ಲಿ ಸೋಂಕು ದೊಡ್ಡ ಪ್ರಮಾಣದಲ್ಲಿ ಹರಡುವ ಸಾಧ್ಯತೆಯಿಲ್ಲ ಎಂದು ಸಾರ್ವಜನಿಕ ಆರೋಗ್ಯ ತಜ್ಞ ಚಂದ್ರಕಾಂತ ಲಹಾರಿಯಾ ಅಭಿಪ್ರಾಯ ಪಟ್ಟಿದ್ದಾರೆ.



### 2 ಸಾವಿರಕ್ಕಿಂತ ಕಡಿಮೆ ಕೇಸ್

**ಭಾ**ರತದಲ್ಲಿ ಕರೊನಾ ಸೋಂಕು ಕ್ಷೀಣಿಸುತ್ತಿದ್ದು ಭಾನುವಾರ 1,761 ಹೊಸ ಕೇಸ್‌ಗಳು ವರದಿಯಾಗಿವೆ. ಇದು ಸುಮಾರು ಎರಡು ವರ್ಷ, ಅಂದರೆ 688 ದಿನಗಳಲ್ಲಿ ಅತ್ಯಂತ ಕಡಿಮೆ ದೈನಿಕ ಪ್ರಕರಣವಾಗಿದೆ. ದೇಶದಲ್ಲಿ ಸೋಂಕಿತರ ಒಟ್ಟು ಸಂಖ್ಯೆ 4,30,07,841ಕ್ಕೆ ಏರಿದೆ. 127 ಜನರು ಬಲಿಯಾಗಿದ್ದು ಮೃತರ ಸಂಖ್ಯೆ 5,16,479ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

### ತಪ್ಪು ಮಾಹಿತಿಗೆ ಡಬ್ಲ್ಯುಎಚ್‌ಒ ಕಳವಳ

**ಕೋ**ವಿಡ್ ಸಾಂಕ್ರಾಮಿಕತೆ ಬಗ್ಗೆ ಜಗತ್ತಿನಾದ್ಯಂತ ತಪ್ಪು ದಾರಿಗೆಳೆಯುವ ಮಾಹಿತಿ ಹರಿದಾಡುತ್ತಿರುವುದು ಕಳವಳದ ವಿಚಾರವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ. ಸಾಂಕ್ರಾಮಿಕತೆ ಅಂತ್ಯಗೊಂಡಿದೆ. ಒಮಿಕ್ರಾನ ಪ್ರಭೇದ ತುಂಬಾ ಮೃದು ಪರಿಣಾಮದ್ದು ಹಾಗೂ ಅದುವೇ ಕೊನೆಯ ರೂಪಾಂತರಿ ಎಂಬಂಥ ತಪ್ಪು ಅಭಿಪ್ರಾಯಗಳು ಹೆಚ್ಚಾಗಿ ಹರಿದಾಡುತ್ತಿವೆ. ಅದರಿಂದ ಸೋಂಕಿನ ಹೆಚ್ಚಳವಾದಾಗ ಆತಂಕ ಮೂಡುತ್ತದೆ ಎಂದು ಕರೊನಾ ಕುರಿತ ಡಬ್ಲ್ಯುಎಚ್‌ಒ ತಾಂತ್ರಿಕ ಸಲಹಾ ಸಮಿತಿ ಮುಖ್ಯಸ್ಥೆ ಮಾರಿಯಾ ವಾನ್ ಕೆರ್‌ಖೋವ್ ಹೇಳಿದ್ದಾರೆ. ಈ ಎಲ್ಲ ತಪ್ಪು ಮಾಹಿತಿಗಳು ಗೊಂದಲ ಹುಟ್ಟಿಸಿ ಸೋಂಕು ಹೆಚ್ಚಾಗಲು ಕಾರಣವಾಗಿವೆ ಎಂದವರು ತಿಳಿಸಿದ್ದಾರೆ. ಕೋವಿಡ್ ಸೋಂಕನ್ನು ಎದುರಿಸಲು ಲಸಿಕೆ ಹಾಕಿಸಿಕೊಳ್ಳುವುದು ತುಂಬಾ ಅಗತ್ಯ ಎಂದವರು ಪ್ರತಿಪಾದಿಸಿದ್ದಾರೆ.

### 2ನೇ ಡೋಸ್ ಅಂತರ ಇಳಿಕೆ

**ಕೋ**ವಿಶೀಲ್ಡ್ ಲಸಿಕೆಯ ಮೊದಲ ಡೋಸ್ ನೀಡಿದ 8ರಿಂದ 16 ವಾರದ ನಡುವೆ ಎರಡನೇ ಡೋಸ್ ಹಾಕಬಹುದು ಎಂದು ದೇಶದ ಲಸಿಕೆ ನೀತಿ ಕುರಿತ ಅತ್ಯುನ್ನತ ಸಮಿತಿಯಾದ ಎನ್‌ಟಿಎಜಿಐ ಅಭಿಪ್ರಾಯಪಟ್ಟಿದೆ ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ. ಇದುವರೆಗೆ ಕೋವಿಶೀಲ್ಡ್ 2ನೇ ಡೋಸ್ ಅಂತರ 12ರಿಂದ 16 ವಾರ ಆಗಿತ್ತು. ಲಸಿಕೆ ಅಭಿಯಾನದಲ್ಲಿ ಬಳಕೆಯಾಗುತ್ತಿರುವ ಇನ್ನೊಂದು ವ್ಯಾಕ್ಸಿನ್ ಕೊವ್ಯಾಕ್ಸಿನ್‌ನ 2ನೇ ಡೋಸ್ ಅವಧಿಯನ್ನು ಎನ್‌ಟಿಎಜಿಐ ಇನ್ನೂ ಪರಿಷ್ಕರಿಸಿಲ್ಲ. ಮೊದಲ ಡೋಸ್‌ನ 28 ದಿನಗಳ ನಂತರ ಕೊವ್ಯಾಕ್ಸಿನ್‌ನ 2ನೇ ಡೋಸ್ ನೀಡಲಾಗುತ್ತಿದೆ.

### ಗರ್ಭಿಣಿಯರಿಗೆ ಕೋವಿಡ್ ಲಸಿಕೆ ಅಗತ್ಯ

**ಗ**ರ್ಭಿಣಿಯರು ಕೋವಿಡ್ ಲಸಿಕೆ ಪಡೆಯುವುದು ಅಗತ್ಯ ಎಂದು ಬಾಣಂತಿಯರ ಆರೈಕೆ ತಜ್ಞೆ ಸ್ನ್ಯಾಸಿ ಪಾಟ್ ಅಭಿಪ್ರಾಯ ಪಟ್ಟಿದ್ದಾರೆ. ಅವರು ಅಮೆರಿಕದ ಯುಮಾಸ್ ಚಾನ್ ಮೆಡಿಕಲ್ ಸ್ಕೂಲ್‌ನ ಕೌಟುಂಬಿಕ ಔಷಧಿ ಹಾಗೂ ಸಾಮುದಾಯಿಕ ಆರೋಗ್ಯದ ಪ್ರೊಫೆಸರ್ ಆಗಿದ್ದಾರೆ.

# ಮಳೆ: ಧರೆಗುರುಳಿದ ಮರಗಳು

## ವಿಲ್ಸನ್ ಗಾರ್ಡನ್, ಜೆಪಿ ನಗರ, ಮಲ್ಲೇಶ್ವರದಲ್ಲಿ ಸಂಚಾರ ಅಸ್ತವ್ಯಸ್ತ

- ರಾಜಧಾನಿಯ ವಿ.ನಾಗೇನಹಳ್ಳಿಯ ವ್ಯಾಪ್ತಿ 38 ಮಿಲಿ ಮೀ. ಮಳೆ
- ಯಶವಂತಪುರ ವ್ಯಾಪ್ತಿಯ ತುಮಕೂರು ರಸ್ತೆಯಲ್ಲಿ ಸುರಿದ ಮಳೆಗೆ ವಾಹನ ಸವಾರರು ಪರದಾಡಿದರು.

**ಬೆಂಗಳೂರು:** ಆಗ್ನೇಯ ಬಂಗಾಳ ಕೊಲ್ಲಿಯಲ್ಲಿ ವಾಯು ಭಾರ ಕುಸಿತ ಉಂಟಾದ ಹಿನ್ನೆಲೆಯಲ್ಲಿ ರಾಜಧಾನಿಯ ಹಲವು ಪ್ರದೇಶಗಳಲ್ಲಿ ಭಾನುವಾರ ಮಳೆ ಬಿದ್ದಿದೆ. ನಗರದ ವಿ.ನಾಗೇನಹಳ್ಳಿಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಅಂದರೆ 38 ಮಿಲಿ ಮೀ. ಮಳೆ ಸುರಿದಿದೆ.

ವಿಲ್ಸನ್ ಗಾರ್ಡನ್, ಜೆಪಿ ನಗರ 5ನೇ ಹಂತದ ವ್ಯಾಪ್ತಿಯಲ್ಲಿ ಮರ ಧರೆಗುರುಳಿವೆ. ಯಶವಂತಪುರ ವ್ಯಾಪ್ತಿಯ ತುಮಕೂರು ರಸ್ತೆಯಲ್ಲಿ ಮಳೆ ನೀರು ಸರಾಗವಾಗಿ ಹರಿದ ಹಿನ್ನೆಲೆಯಲ್ಲಿ (ವಾಟರ್ ಲಾಗಿಂಗ್ ) ವಾಹನ ಸವಾರರು ಕಿರಿಕಿರಿ ಅನುಭವಿಸಿದರು. ಸಂಜೆ ವೇಳೆ ಮಳೆ ಸುರಿದ ಹಿನ್ನೆಲೆಯಲ್ಲಿ ವಿಕೆಂಡ್ ಹುಮನಸ್ಸಿನಲ್ಲಿದ್ದ ಜನರಿಗೆ ತಣ್ಣೀರು ಎರೆಚಿತು.

ಆನೇಕಲ್ ವ್ಯಾಪ್ತಿಯ ಅಂದೇನಹಳ್ಳಿಯಲ್ಲಿ 22 ಮಿ.ಮೀ, ಮನೋರಾಯನ ಪಾಳ್ಯ ವ್ಯಾಪ್ತಿಯಲ್ಲಿ 9.5 ಮಿ.ಮೀ, ಪ್ಯಾಲೇಸ್ ಗುಟ್ಟಹಳ್ಳಿ ವ್ಯಾಪ್ತಿಯಲ್ಲಿ 7 ಮಿ.ಮೀ, ಪೀಣ್ಯಾ ಸಮೀಪದ ಚಿಕ್ಕಬಿದರಕಲ್ಲು ವ್ಯಾಪ್ತಿಯಲ್ಲಿ 6.5 ಮಿ.ಮೀ ಮಳೆ ಸುರಿದಿರುವ ಬಗ್ಗೆ ವರದಿಯಾಗಿದೆ.

ಬೆಂಗಳೂರು ಉತ್ತರ ಭಾಗದ ಮಂಚೋಹಳ್ಳಿ ವ್ಯಾಪ್ತಿಯಲ್ಲಿ 3 ಮಿ.ಮೀ, ಸಿದ್ದನ ಹೊಸಹಳ್ಳಿ ಭಾಗದಲ್ಲಿ 6 ಮಿ. ಮೀ, ಪೀಣ್ಯಾ ಸಮೀಪದ ಚಿಕ್ಕಬಿದರಕಲ್ಲು ವ್ಯಾಪ್ತಿಯಲ್ಲಿ 6.5 ಮಿ.ಮೀ, ಲಕ್ಷ್ಮೀಪುರದಲ್ಲಿ 4 ಮಿ.ಮೀ., ಯಲಹಂಕದ ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ 8 ಮಿ.ಮೀ ಮಳೆ ಸುರಿದಿದೆ.

ಹೊರಮಾವು ವ್ಯಾಪ್ತಿಯಲ್ಲಿ 3.5 ಮಿ. ಮೀ, ಕೆ.ಆರ್ .ಪುರ ವ್ಯಾಪ್ತಿಯಲ್ಲಿ 1 ಮಿ.ಮೀ ಮಳೆ ಸುರಿದಿದೆ ಎಂದು ವರುಣಾ ಮಿತ್ರ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



**ನಗರದ ಸಂಪಿಗೆ ರಸ್ತೆಯಲ್ಲಿ ಮಳೆ ಹಿನ್ನೆಲೆಯಲ್ಲಿ ಮರ ಧರೆಗೆ ಉರುಳಿರುವುದು.**

ಆಗ್ನೇಯ ಬಂಗಾಳ ಕೊಲ್ಲಿಯಲ್ಲಿ ಪ್ರಬಲವಾದ ವಾಯು ಭಾರ ಕುಸಿತ ಉಂಟಾಗಿರುವ ಹಿನ್ನೆಲೆಯಲ್ಲಿ ಮುಂದಿನ 2 ದಿನಗಳ ಕಾಲ ಬೆಂಗಳೂರಿನ ಕೆಲವು ಕಡೆಗಳಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಧರೆಗುರುಳಿದ ಮರಗಳು:** ವಿಲ್ಸನ್ ಗಾರ್ಡನ್‌ನ ಹೊಂಬೇಗೌಡ ನಗರ ಪ್ರದೇಶ ವ್ಯಾಪ್ತಿಯಲ್ಲಿ ಮರ ಧರೆಗುರುಳಿದೆ. ಜತೆಗೆ ಜೆ.ಪಿ.ನಗರದ 5ನೇ ಹಂತದ ಪ್ರದೇಶದಲ್ಲೂ ಕೂಡ ಮರ ರಸ್ತೆಗುರುಳಿದೆ ಎಂದು ಬಿಬಿಎಂಪಿ ಅಧಿಕಾರಿಗಳ ಮಾಹಿತಿ ನೀಡಿದ್ದಾರೆ. ಮರಗಳು ಧರೆಗುರುಳಿದ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಅಪಾಯ ಸಂಭವಿಸಿಲ್ಲ. ಧರೆ ಗುರುಳಿದ ಮರಗಳನ್ನು ರಸ್ತೆಯಿಂದ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ತಿಳಿಸಿದ್ದಾರೆ.

ಯಶವಂತಪುರ ವ್ಯಾಪ್ತಿಯ ತುಮಕೂರು ರಸ್ತೆಯಲ್ಲಿ ಮಳೆ ಸುರಿದ ಹಿನ್ನೆಲೆಯಲ್ಲಿ ರಸ್ತೆಯ ತುಂಬೆಲ್ಲಾ ನೀರು ತುಂಬಿಕೊಂಡಿತ್ತು. ಆ ಹಿನ್ನೆಲೆಯಲ್ಲಿ ವಾಹನ ಸವಾರರು ಕಿರಿಕಿರಿ ಅನುಭವಿಸಿದರು. ಸ್ಥಳಕ್ಕೆ ಆಗಮಿಸಿದ ಬಿಬಿಎಂಪಿ ಅಧಿಕಾರಿಗಳು ರಸ್ತೆಯ ತುಂಬೆಲ್ಲ ತುಂಬಿಕೊಂಡಿದ್ದ ನೀರು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಭಾನುವಾರ ಬೆಂಗಳೂರು ಸಿಟಿ ಪ್ರದೇಶ ವ್ಯಾಪ್ತಿಯಲ್ಲಿ 33.2 ಡಿ. ಸೆ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 31.2 ಡಿ. ಸೆ. ಮತ್ತು ಎಚ್.ಎಲ್. ವಿಮಾನ ನಿಲ್ದಾಣದಲ್ಲಿ 32.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಕೊವಿಶೀಲ್ಡ್ ಡೋಸ್‌ಗಳ ನಡುವಿನ ಅಂತರ ಇಳಿಕೆ

**ಎನ್‌ಟಿಎಜಿಐ ಶಿಫಾರಸು**

**ನವದೆಹಲಿ:** ಕೊವಿಶೀಲ್ಡ್ ಲಸಿಕೆಯ ಮೊದಲ ಡೋಸ್ ಮತ್ತು ಎರಡನೇ ಡೋಸ್ ನಡುವಿನ ಅಂತರವು ಸದ್ಯದಲ್ಲೇ 8 ರಿಂದ 16 ವಾರಗಳಿಗೆ ಇಳಿಯಲಿದೆ. ಲಸಿಕೆಗೆ ಸಂಬಂಧಿಸಿದ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ) ಈ ಕುರಿತು ಶಿಫಾರಸು ಮಾಡಿದೆ.

ಪ್ರಸ್ತುತ ಕೊವಿಶೀಲ್ಡ್‌ನ ಮೊದಲ ಡೋಸ್ ಪಡೆದವರಿಗೆ 12-16 ವಾರಗಳ ಬಳಿಕವೇ ಎರಡನೇ ಡೋಸ್ ನೀಡಲಾಗುತ್ತಿದೆ. ಎರಡನೇ ಡೋಸ್ ಅನ್ನು 8-16 ವಾರಗಳಲ್ಲಿ ನೀಡಿದರೂ, 12-16 ವಾರಗಳ ಬಳಿಕ ಉತ್ಪತ್ತಿಯಾಗುವಷ್ಟೇ ಪ್ರತಿಕಾಯ ಉತ್ಪತ್ತಿಯಾಗುತ್ತದೆ ಎನ್ನುವುದನ್ನು ಇತ್ತೀಚಿನ ಹಲವು ಜಾಗತಿಕ ವೈಜ್ಞಾನಿಕ ಪುರಾವೆಗಳು ಸ್ಪಷ್ಟಪಡಿಸಿವೆ. ಈ ಹಿನ್ನೆಲೆಯಲ್ಲಿ ಅಂತರವನ್ನು ಇಳಿಸುವ ನಿರ್ಧಾರಕ್ಕೆ ಬರಲಾಯಿತು ಎಂದು ಸಮಿತಿ ಹೇಳಿದೆ.

ಭಾರತ್ ಬಯೋಟೆಕ್ ಕಂಪನಿಯ ಕೊವ್ಯಾಕ್ಸಿನ್ ಲಸಿಕೆಯನ್ನು ಮೊದಲ ಡೋಸ್ ನೀಡಿದ 28 ದಿನಗಳಲ್ಲಿ ಎರಡನೇ ಡೋಸ್ ನೀಡಲಾಗುತ್ತದೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ.

### ಎರಡನೇ ವರ್ಷ ಪಾಲಿಕೆ ಆಡಳಿತಾಧಿಕಾರಿಯಿಂದಲೇ ಬಜೆಟ್ ಮಂಡನೆ

# ಈ ಬಾರಿ 9 ಸಾವಿರ ಕೋಟಿ ಮೀರದ ಬಿಬಿಎಂಪಿ ಬಜೆಟ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜಧಾನಿ ಬೆಂಗಳೂರಿನ ಅಭಿವೃದ್ಧಿ ಸಂಬಂಧ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದ್ದು, ಬಜೆಟ್ ಗಾತ್ರ 9 ಸಾವಿರ ಕೋಟಿ ರು. ಮೀರದಂತೆ ಇರಲಿದೆ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯಿದೆ-2021ರ ಅನ್ವಯ ಆದಾಯ ಮತ್ತು ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ 9 ಸಾವಿರ ಕೋಟಿ ರು. ಮೀರದಂತೆ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದೆ.

ಕಳೆದ ಮೂರು ಆರ್ಥಿಕ ಸಾಲಿನಲ್ಲಿ 9,500 ಕೋಟಿ ರು. ಮೀರಿದ ಆಯವ್ಯಯ ಮಂಡನೆ ಮಾಡಲಾಗಿತ್ತು. ಆದರೆ, ಈ ವರ್ಷ ವಿತ್ತೀಯ ಹೊಣೆಗಾರಿಕೆ ಕಾಯಿದೆ ಜಾರಿಯಾಗಿದ್ದರಿಂದ ಆದಾಯದ ಮೂಲ ಇಲ್ಲದಿದ್ದರೂ ಕೊರತೆ ಇಟ್ಟುಕೊಂಡು ಬಜೆಟ್ ಮಂಡಿಸುವ ಮೂಲಕ ವೆಚ್ಚ ತೋರಿಸುವುದಕ್ಕೆ ಕಡಿವಾಣ ಹಾಕಲಾಗುತ್ತಿದೆ.

ಆದರಲ್ಲೂ, ಕೇಂದ್ರ ಮತ್ತು ರಾಜ್ಯ ಸರಕಾರದ ಅನುದಾನ ಹಾಗೂ ಪಾಲಿಕೆಗೆ ಎಲ್ಲ ಮೂಲಗಳಿಂದ ಬರುವ ಆದಾಯವನ್ನು ಪರಿಗಣಿಸಿದರೂ 10 ಸಾವಿರ ಕೋಟಿ ರು. ಆದಾಯ ಮೂಲ ತೋರಿಸಲಾಗುತ್ತಿಲ್ಲ. ಹೀಗಾಗಿ, ಈ ವರ್ಷ 9 ಸಾವಿರ ಕೋಟಿ ರು. ಮೀರದಂತೆ ಬಜೆಟ್ ಮಂಡನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜನಪ್ರತಿನಿಧಿಗಳಿಲ್ಲದೆ ಸತತ ಎರಡನೇ ವರ್ಷವೂ ಪಾಲಿಕೆ ಆಡಳಿತಾಧಿಕಾರಿ ನೇತೃತ್ವದಲ್ಲಿ ಮಂಡಿಸಲಾಗುತ್ತಿದೆ.



**ಮಾಸಾಂತ್ಯಕ್ಕೆ ಬಜೆಟ್:** ಮಾಸಾಂತ್ಯದಲ್ಲಿ ಆಯವ್ಯಯ ಮಂಡನೆ ಆಗಲಿದೆ. ಎರಡು ತಿಂಗಳಿಂದ ಪಾಲಿಕೆಯ 23 ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಿ ಆದಾಯ ಕ್ರೋಢೀಕರಣ ಮತ್ತು ವೆಚ್ಚದ ಬಗ್ಗೆ ಲೆಕ್ಕಾಚಾರ ಮಾಡಿ ಈ ಮೊದಲು ಕರಡು ಪ್ರತಿ ಸಿದ್ಧಪಡಿಸಲಾಗಿತ್ತು. ಆದರೆ, ಪಾಲಿಕೆಯಲ್ಲಿ ಕಡ್ಡಾಯವಾಗಿ ಆರ್ಥಿಕ ಶಿಸ್ತು ತರುವ ನಿಟ್ಟಿನಲ್ಲಿ ಇತ್ತೀಚೆಗೆ ಸರಕಾರ ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯಿದೆ 2021 ಅನ್ನು ಜಾರಿಗೊಳಿಸಿದೆ.

ಈ ಕಾಯಿದೆ ನಿಯಮಗಳನ್ನು 2022- 23ನೇ ಸಾಲಿನ ಬಜೆಟ್‌ನಲ್ಲಿಯೇ ಅಳವಡಿಕೆ ಮಾಡಿಕೊಳ್ಳುವಂತೆ ಸೂಚಿಸಿರುವುದರಿಂದ ಈವರೆಗೆ ಸಿದ್ಧಪಡಿಸಿದ್ದ ಕರಡು ಪ್ರತಿಯಲ್ಲಿ ವೆಚ್ಚ ತಗ್ಗಿಸುವುದು ಸೇರಿ ಕೆಲವು ಬದಲಾವಣೆ ಮಾಡಲು ಪಾಲಿಕೆ ಮುಂದಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಆದಾಯ ಮೂಲ ಯಾವುದು?

**ಪಾಲಿಕೆ ಆಸ್ತಿ ತೆರಿಗೆಯಿಂದ 4 ಸಾವಿರ ಕೋಟಿ ರು., ಕಟ್ಟಡ ಪರವಾನಗಿ, ಉದ್ಯಮ ಪರವಾನಗಿ, ಕಟ್ಟಡಗಳ ಬಾಡಿಗೆ ಮುಂತಾದ ಆದಾಯ ಮೂಲಗಳಿಂದ 1,200 ಕೋಟಿ ರು. ತೆರಿಗೆಯೇತರ ಆದಾಯ ಸಂಗ್ರಹಣೆಯ ಗುರಿ ಹೊಂದಲಾಗಿತ್ತು. ಆದರೆ, ಈ ವರ್ಷ ತೆರಿಗೆಯೇತರ ಆದಾಯವನ್ನು 1,600 ಕೋಟಿ ರು.ಗೆ ಹೆಚ್ಚಳ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಪಾಲಿಕೆಯ ಹಿರಿಯ ಅಧಿಕಾರಿಗಳು ಪಾಲಿಕೆ ಬಜೆಟ್ ಕುರಿತು ಮಾಹಿತಿ ನೀಡಿದ್ದಾರೆ.**

ಸಂಯುಕ್ತ ಕರ್ನಾಟಕ



# 9 ಸಾವಿರ ಕೋಟಿಗೆ ಸೀಮಿತ

ಸಂ.ಕ. ಸಮಾಚಾರ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದ್ದು, ಬಜೆಟ್ ಗಾತ್ರ, 9 ಸಾವಿರ ಕೋಟಿ ರೂ ಮೀರದಂತೆ ಎಚ್ಚರಿಕೆ ವಹಿಸಲಾಗುತ್ತಿದೆ.

ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ (ಎಫ್‌ಆರ್‌ಬಿಎಂ) 2021ರ ಅನ್ವಯ ಆದಾಯ ಮತ್ತು ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ 9 ಸಾವಿರ ಕೋಟಿ ರೂ ಮೀರದಂತೆ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದೆ.

**ಪಾಲಿಕೆ ಬಜೆಟ್**

ಕಳೆದ ಮೂರು ಆರ್ಥಿಕ ಸಾಲಿನಲ್ಲಿ 9,500 ಕೋಟಿ ರೂ. ಮೀರಿದ ಆಯವ್ಯಯ ಮಂಡನೆ ಮಾಡಲಾಗಿತ್ತು. ಆದರೆ, ಈ ವರ್ಷ ವಿತ್ತೀಯ ಹೊಣೆಗಾರಿಕೆ ಕಾಯ್ದೆ ಜಾರಿಯಾಗಿದ್ದರಿಂದ ಆದಾಯದ ಮೂಲ ಇಲ್ಲದಿದ್ದರೂ ಕೊರತೆ ಇಟ್ಟುಕೊಂಡು ಬಜೆಟ್ ಮಂಡಿಸುವ ಮೂಲಕ ವೆಚ್ಚ ತೋರಿಸುವುದಕ್ಕೆ ಕಡಿವಾಣ ಹಾಕಲಾಗುತ್ತಿದೆ. ಆದರಲ್ಲೂ, ಕೇಂದ್ರ, ಮತ್ತು ರಾಜ್ಯ ಸರ್ಕಾರದ ಅನುದಾನ ಹಾಗೂ ಪಾಲಿಕೆಗೆ ಎಲ್ಲ ಮೂಲಗಳಿಂದಬರುವ ಆದಾಯವನ್ನು ಪರಿಗಣಿಸಿದರೂ 10 ಸಾವಿರ ಕೋಟಿ ರೂ ಆದಾಯ ಮೂಲ ತೋರಿಸಲಾಗುತ್ತಿಲ್ಲ. ಹೀಗಾಗಿ, ಈ ವರ್ಷ 9 ಸಾವಿರ ಕೋಟಿ ರೂ ಮೀರದಂತೆ ಬಜೆಟ್ ಮಂಡನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜನಪ್ರತಿನಿಧಿಗಳಿಲ್ಲದೆ ಸತತ ಎರಡನೇ ವರ್ಷವೂ ಪಾಲಿಕೆ ಆಡಳಿತಾಧಿಕಾರಿ ನೇತೃತ್ವದಲ್ಲಿ ಮಂಡಿಸಲಾಗುತ್ತಿದೆ. ಈ ತಿಂಗಳ ಮಾಸಾಂತ್ಯದಲ್ಲಿ ಆಯವ್ಯಯ ಮಂಡನೆ ಆಗಲಿದೆ. ಎರಡು ತಿಂಗಳಿಂದ ಪಾಲಿಕೆಯ 23 ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಿ ಆದಾಯ ಕ್ರೋಢೀಕರಣ ಮತ್ತು ವೆಚ್ಚದ ಬಗ್ಗೆ ಲೆಕ್ಕಾಚಾರ ಮಾಡಿ ಈ ಮೊದಲು ಕರಡು ಪ್ರತಿ ಸಿದ್ಧಪಡಿಸಲಾಗಿತ್ತು. ಆದರೆ, ಪಾಲಿಕೆಯಲ್ಲಿ ಕಡ್ಡಾಯವಾಗಿ ಆರ್ಥಿಕ ಶಿಸ್ತು ತರುವ ನಿಟ್ಟಿನಲ್ಲಿ ಇತ್ತೀಚೆಗೆ ಸರ್ಕಾರ ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ 2021 ಅನ್ನು ಜಾರಿಗೊಳಿಸಿದೆ. ಈ ಕಾಯ್ದೆಯ ನಿಯಮಗಳನ್ನು 2022- 23ನೇ ಸಾಲಿನ ಬಜೆಟ್‌ನಲ್ಲಿಯೇ ಅಳವಡಿಕೆ ಮಾಡಿಕೊಳ್ಳುವಂತೆ ಸೂಚಿಸಿರುವುದರಿಂದ ಈವರೆಗೆ ಸಿದ್ಧಪಡಿಸಿದ್ದ ಕರಡು ಪ್ರತಿಯಲ್ಲಿ ವೆಚ್ಚ ತಗ್ಗಿಸುವುದು ಸೇರಿ ಕೆಲವು ಬದಲಾವಣೆ ಮಾಡಲು ಪಾಲಿಕೆ ಮುಂದಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ವಿಷಜಂತುಗಳಿಗಿಲ್ಲ ಸ್ಥಳಾವಕಾಶ | ತಂಪನೆಯ ಸ್ಥಳಕ್ಕಾಗಿ ಮನೆಗೆ ನುಗ್ಗುತ್ತಿರುವ ಹಾವು

# ಉರಿಬಿಸಿಲಿನ ಹಿಂಸೆ ಜೊತೆ ಹಾವಿನ ಕಾಟ

ಸಂ.ಕ. ಸಮಾಚಾರ ಬೆಂಗಳೂರು

ನಗರ ವೇಗವಾಗಿ ಬೆಳೆಯುತ್ತಿದ್ದು ಈಗ ಜಂತುಗಳಿಗೆ ಸ್ಥಳಾವಕಾಶವಿಲ್ಲದೆ ಮನೆಗಳಿಗೆ ನುಗ್ಗತೊಡಗಿವೆ.

ಬೇಸಿಗೆಯ ಬಿಸಿಯ ತಾಪ ಶುರುವಾಗುತ್ತಿದ್ದಂತೆ ಹಾವುಗಳು ತಂಪನೆಯ ಸ್ಥಳಕ್ಕಾಗಿ ಮನೆಗಳಿಗೆ ನುಗ್ಗಿ ಮನೆಯವರಿಗೆ ಗೊತ್ತಿಲ್ಲದಂತೆ ಆಶ್ರಯ ಪಡೆಯತೊಡಗಿವೆ. ಇದು ನಾಗರಿಕರಲ್ಲಿ ಭೀತಿ ಶುರುವಾಗಿದೆ.

ನಗರದ ಹೊರವಲಯದಲ್ಲಿ ಹೊಲ, ಗದ್ದೆ, ತೋಟಗಳೆಲ್ಲ ಬಡಾವಣೆಗಳಾಗಿರುವುದರಿಂದ ಹಾವು ಸೇರಿದಂತೆ ಕೆಲವು ಜಂತುಗಳಿಗೆ ಆಶ್ರಯವೇ ಇಲ್ಲವಾಗಿದೆ. ಶಿಕ್ಷ ಸ್ಥಳದಲ್ಲಿ ಆಶ್ರಯ ಪಡೆದುಕೊಂಡು ಜೀವ ಕಾಪಾಡಿಕೊಳ್ಳುತ್ತಿರುವ ಈ ಜಂತುಗಳು ಬೇಸಿಗೆ ಬರುತ್ತಿದ್ದಂತೆಯೇ ತಂಪಾದ ಸ್ಥಳಗಳನ್ನು ಹುಡುಕಿಕೊಂಡು ನೇರವಾಗಿ ಮನೆಗಳಿಗೆ ನುಗ್ಗುತ್ತಿವೆ.

ಬೆಂಗಳೂರು ಹೊರವಲಯದವರಿಗಂತೂ ಉರಿಬಿಸಿಲಿನ ಹಿಂಸೆ ಜೊತೆಗೆ ಹಾವಿನ ಭೀತಿ ಶುರುವಾಗಿದೆ. ಶೌಚಾಲಯ, ಸ್ನಾನದ ಕೋಣೆ, ಅಡುಗೆ ಮನೆ, ಪಾತ್ರೆ ತೊಳೆಯುವ ಸಿಂಕ್, ಬಟ್ಟೆ ಒಣಗಿಸಲು ಕಟ್ಟಿದ ದಾರ, ಮನೆಯ ಹಿತ್ತಲು, ಅಷ್ಟೇ



ಅಲ್ಲ, ಮಲಗುವ ಕೋಣೆಯಲ್ಲೂ ಹಾವುಗಳು ಕಾಣಿಸಿಕೊಳ್ಳುತ್ತಿರುವುದು ಜನರ ಭೀತಿಗೆ ಕಾರಣವಾಗಿದೆ.

ಬಿಸಿಲ ತೀವ್ರತೆ ಹೆಚ್ಚಾಗುತ್ತಿವೆ. ಹೀಗಾಗಿ, ಹೊರಗೆ ಬರುತ್ತಿರುವ ಹಾವುಗಳು ಮನೆಯೊಳಗಿನ ಮೂಲೆಯೊಳಗೆ ಸೇರಿಕೊಳ್ಳುತ್ತಿವೆ. ಹಾವುಗಳ ಕಾಟಕ್ಕೆ ಬೆಂಗಳೂರಿಗರು ಬೆಚ್ಚಿಬಿದ್ದಿದ್ದು, ಬಿಬಿಎಂಪಿಗೆ ದಿನಕ್ಕೆ

- ನಗರದ ನಾಗರಿಕರಿಗೆ ವಿಷ ಸರ್ಪಗಳ ಭೀತಿ
- ಬಿಬಿಎಂಪಿಗೆ ದಿನವೂ ಕನಿಷ್ಠ 10 ದೂರವಾಣಿ ಕರೆ
- ವನ್ಯಜೀವಿ ಸಂರಕ್ಷಕರಿಗೆ ಹಾವಿನ ರಕ್ಷಣೆಯ ಸವಾಲು

ಏನಿಲ್ಲವೆಂದರೂ. ಓರ್ವ ಸ್ವಯಂ ಸೇವಕರಿಗೆ ಪ್ರತಿ ದಿನ 5 ರಿಂದ 10 ದೂರವಾಣಿ ಕರೆ ಬರುತ್ತಿದೆ. ಇದರಿಂದ ಬಿಬಿಎಂಪಿ ವನ್ಯಜೀವಿ ಸಂರಕ್ಷಕರಿಗೆ ಹಾವು ರಕ್ಷಣೆ ಮಾಡುವುದು ಪೂರ್ಣ ಕೆಲಸವಾಗಿ ಬಿಟ್ಟಿದೆ.

ಹಾವಿನ ಕಾಟದ ಬಗ್ಗೆ ವೈಟ್‌ಫೀಲ್ಡ್, ಮಾರತ್ತಹಳ್ಳಿ, ಹೆಚ್‌ಬಿಆರ್ ಲೇಔಟ್, ಮಹದೇವಪುರ, ಬಾಣಸವಾಡಿ ಹಾಗೂ ಕೆಆರ್‌ಪುರ, ಪೀಣ್ಯ, ಪ್ರದೇಶಗಳಲ್ಲಿ ಹೆಚ್ಚಾಗಿ ಹಾವುಗಳು ಮನೆಗೆ ನುಗ್ಗುತ್ತಿರುವ ದೂರುಗಳು ಬರುತ್ತಿವೆ. ಕೆಲವು ಕಡೆ ಸ್ವಯಂ ಸೇವಕರು ಹಾವನ್ನು ಹಿಡಿಯಲು ಕೆಲವು ಸಲ ಗಂಟೆಗಟ್ಟಲೆ ಸಮಯ ತೆಗೆದುಕೊಳ್ಳುವಂತಾಗಿದೆ.

# ಕಲ್ಯಾಣ ಕಾರ್ಯಕ್ರಮಕ್ಕೆ ಅರ್ಜಿ

**ಬೆಂಗಳೂರು:** ಬಿಬಿಎಂಪಿಯ 2021-22 ನೇ ಸಾಲಿನ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ವಿಶೇಷ ಚೇತನರು ಹಾಗೂ ಸಾಮಾನ್ಯ ವರ್ಗ, ತೃತೀಯ ಲಿಂಗಿಗಳ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ವಲಯದ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೇಂದ್ರ, ಕಚೇರಿಯಲ್ಲಿ ಅಥವಾ ವಲಯದ ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ) ರವರ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಬಿಬಿಎಂಪಿ ತಿಳಿಸಿದೆ.

# ಸೋಂಕಿಗೆ ಇಬ್ಬರು ಬಲಿ

**ಬೆಂಗಳೂರು :** ರಾಜ್ಯದಲ್ಲಿ ಕೊರೊನಾ ಸೋಂಕಿನ ಆರ್ಭಟ ಗಣನೀಯವಾಗಿ ಇಳಿಮುಖವಾಗಿದ್ದು ಭಾನುವಾರ 109 ನೂತನ ಕೇಸ್‌ಗಳು ಪತ್ತೆಯಾಗಿವೆ. ಮಾರಕ ಸೋಂಕಿಗೆ ಬೆಂಗಳೂರು ಮತ್ತು ಹಾಸನ ಜಿಲ್ಲೆಯ ತಲಾ ಓರ್ವ ವ್ಯಕ್ತಿ ಸೇರಿದಂತೆ ಇಬ್ಬರು ಸಾವನ್ನಪ್ಪಿದ್ದಾರೆ. ಜೊತೆಗೆ 143 ಸೋಂಕಿತರು ವಿವಿಧ ಆಸ್ಪತ್ರೆಗಳಿಂದ ಬಿಡುಗಡೆಯಾಗಿದ್ದಾರೆ. ಇತ್ತ ಬೆಂಗಳೂರಿನಲ್ಲಿ 91 ಹೊಸ ಪ್ರಕರಣಗಳು ಕಂಡು ಬಂದಿದ್ದು, 125 ಮಂದಿ ನಂಜಿನಿಂದ ಪಾರಾಗಿ ಸಂಪೂರ್ಣ ಗುಣಮುಖರಾಗಿದ್ದಾರೆ. ಇನ್ನು ಬೆಂಗಳೂರನ್ನು ಹೊರತು ಪಡಿಸಿ ರಾಜ್ಯದ ಬೇರೆ ಯಾವ ಜಿಲ್ಲೆಯಲ್ಲೂ ನೂತನ ಕೇಸ್‌ಗಳ ಸಂಖ್ಯೆ 4 ದಾಟಿಲ್ಲ. ಬೆಂಗಳೂರು ಗ್ರಾಮಾಂತರ, ಬೀದರ್, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕಲಬುರಗಿ, ಕೊಡಗು, ಕೊಪ್ಪಳ, ಮಂಡ್ಯ, ರಾಮನಗರ, ಶಿವಮೊಗ್ಗ, ಉತ್ತರ ಕನ್ನಡ, ಯಾದಗಿರಿ ಜಿಲ್ಲೆಗಳಲ್ಲಿ ಒಂದೂ ನೂತನ ಕೇಸ್‌ಗಳು ಕಂಡು ಬಂದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

# ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ

ಬೆಂಗಳೂರು,ಮಾ.20-ರಾಜಧಾನಿ ಬೆಂಗಳೂರಿನ ಅಭಿವೃದ್ಧಿ ಸಂಬಂಧ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದ್ದು, ಬಜೆಟ್ ಗಾತ್ರ 9 ಸಾವಿರ ಕೋಟಿ ರೂ ಮೀರದಂತೆ ಇರಲಿದೆ ಎಂದು ಮೂಲಗಳು ತಿಳಿಸಿವೆ.



ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ (ಎಫ್‌ಆರ್‌ಬಿಎಂ) 2021ರ ಅನ್ವಯ ಆದಾಯ ಮತ್ತು ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ 9 ಸಾವಿರ ಕೋಟಿ ರೂ ಮೀರದಂತೆ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದೆ.

ಇನ್ನೂ, ಕಳೆದ ಮೂರು ಆರ್ಥಿಕ ಸಾಲಿನಲ್ಲಿ 9,500 ಕೋಟಿ ರೂ. ಮೀರಿದ ಆಯವ್ಯಯ ಮಂಡನೆ ಮಾಡಲಾಗಿತ್ತು. ಆದರೆ, ಈ ವರ್ಷ

(ಎರಡನೇ ಪುಟ ನೋಡಿ)

# ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ

ವಿತ್ತೀಯ ಹೊಣೆಗಾರಿಕೆ ಕಾಯ್ದೆ ಜಾರಿಯಾಗಿದ್ದರಿಂದ ಆದಾಯದ ಮೂಲ ಇಲ್ಲದಿದ್ದರೂ ಕೊರತೆ ಇಟ್ಟುಕೊಂಡು ಬಜೆಟ್ ಮಂಡಿಸುವ ಮೂಲಕ ವೆಚ್ಚ ತೋರಿಸುವುದಕ್ಕೆ ಕಡಿವಾಣ ಹಾಕಲಾಗುತ್ತಿದೆ.

ಅದರಲ್ಲೂ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಹಾಗೂ ಪಾಲಿಕೆಗೆ ಎಲ್ಲ ಮೂಲಗಳಿಂದ ಬರುವ ಆದಾಯವನ್ನು ಪರಿಗಣಿಸಿದರೂ 10 ಸಾವಿರ ಕೋಟಿ ರೂ ಆದಾಯ ಮೂಲ ತೋರಿಸಲಾಗುತ್ತಿಲ್ಲ. ಹೀಗಾಗಿ, ಈ ವರ್ಷ 9 ಸಾವಿರ ಕೋಟಿ ರೂ ಮೀರದಂತೆ ಬಜೆಟ್ ಮಂಡನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜನಪ್ರತಿನಿಧಿಗಳಿಲ್ಲದೆ ಸತತ ಎರಡನೇ ವರ್ಷವೂ ಪಾಲಿಕೆ ಆಡಳಿತಾಧಿಕಾರಿ ನೇತೃತ್ವದಲ್ಲಿ ಮಂಡಿಸಲಾಗುತ್ತಿದೆ.

ಮಾಸಾಂತ್ಯದಲ್ಲಿ ಆಯವ್ಯಯ ಮಂಡನೆ ಆಗಲಿದೆ. ಎರಡು ತಿಂಗಳಿಂದ ಪಾಲಿಕೆಯ 23 ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಿ ಆದಾಯ ಕ್ರೋಢೀಕರಣ ಮತ್ತು ವೆಚ್ಚದ ಬಗ್ಗೆ ಲೆಕ್ಕಾಚಾರ ಮಾಡಿ ಈ ಮೊದಲು ಕರಡು ಪ್ರತಿ ಸಿದ್ಧಪಡಿಸಲಾಗಿತ್ತು. ಆದರೆ, ಪಾಲಿಕೆಯಲ್ಲಿ ಕಡ್ಡಾಯವಾಗಿ ಆರ್ಥಿಕ ಶಿಸ್ತು ತರುವ ನಿಟ್ಟಿನಲ್ಲಿ ಇತ್ತೀಚೆಗೆ ಸರ್ಕಾರ ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ 2021 ಅನ್ನು ಜಾರಿಗೊಳಿಸಿದೆ.

ಈ ಕಾಯ್ದೆಯ ನಿಯಮಗಳನ್ನು 2022-23ನೇ ಸಾಲಿನ ಬಜೆಟ್‌ನಲ್ಲಿಯೇ ಅಳವಡಿಕೆ ಮಾಡಿಕೊಳ್ಳುವಂತೆ ಸೂಚಿಸಿರುವುದರಿಂದ ಈವರೆಗೆ ಸಿದ್ಧಪಡಿಸಿದ್ದ ಕರಡು ಪ್ರತಿಯಲ್ಲಿ ವೆಚ್ಚ ತಗ್ಗಿಸುವುದು ಸೇರಿ ಕೆಲವು ಬದಲಾವಣೆ ಮಾಡಲು ಪಾಲಿಕೆ ಮುಂದಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಸೋಂಕು ಗಣನೀಯ ಕುಸಿತ

ನವದೆಹಲಿ.ಮಾ20:ಕಳೆದ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 1,761 ಹೊಸ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, 688 ದಿನಗಳಲ್ಲೇ ಇದು ಅತಿ ಕಡಿಮೆ ಪ್ರಕರಣಗಳಾಗಿವೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 4,30,07,841ಕ್ಕೆ ಏರಿಕೆ–ಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಕಳೆದ 24 ಗಂಟೆಗಳಲ್ಲಿ 1,562 ಜನರು ಗುಣಮುಖರಾಗಿದ್ದಾರೆ.

ದೈನಂದಿನ ಕೋವಿಡ್ ದೃಢ ಪ್ರಮಾಣ ಶೇ 0.41 ಆಗಿದೆ. ಮರಣ ಪ್ರಮಾಣ ಶೇ 1.20ರಷ್ಟಿದೆ.

24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 4,31,973 ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, ಈವರೆಗೂ 78.26 ಕೋಟಿ ಜನರಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಈವರೆಗೂ 181.21 ಕೋಟಿ ಡೋಸ್ ಕೋವಿಡ್ ಲಸಿಕೆಯನ್ನು ನೀಡಲಾಗಿದೆ.



ಇದೇ ಅವಧಿಯಲ್ಲಿ 127 ಜನರು ಸೋಂಕಿನಿಂದ ಸಾವಿಗೀಡಾಗಿದ್ದು, ಈವರೆಗಿನ ಮೃತರ ಸಂಖ್ಯೆ 5,16,479ಕ್ಕೆ ತಲುಪಿದೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು, ಸದ್ಯ 26,240 ಸಕ್ರಿಯ ಪ್ರಕರಣಗಳು ಮಾತ್ರ ಇವೆ. ಒಟ್ಟು ಸೋಂಕಿತರ ಪೈಕಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 0.06ರಷ್ಟಿದ್ದರೆ, ದೇಶದ ಕೋವಿಡ್ ಚೇತರಿಕೆಯ ಪ್ರಮಾಣ ಶೇ 98.74ರಷ್ಟಾಗಿದೆ.

ಇನ್ನೊಂದೆಡೆ ಮಹಾರಾಷ್ಟ್ರದಲ್ಲಿ 1,43,766, ಕೇರಳದಲ್ಲಿ 67,315, ಕರ್ನಾಟಕದಲ್ಲಿ 40,035, ತಮಿಳು ನಾಡಿನಲ್ಲಿ 38,025, ದೆಹಲಿಯಲ್ಲಿ 26,146, ಉತ್ತರ ಪ್ರದೇಶದಲ್ಲಿ 23,492 ಮತ್ತು ಪಶ್ಚಿಮ ಬಂಗಾಳದಲ್ಲಿ ಈವರೆಗೆ 21,194 ಜನರು ಸೋಂಕಿನಿಂದ ಸಾವಿಗೀಡಾಗಿದ್ದಾರೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ





**ವಿಚಿತ್ರ ಪಾಲಿಕೆ...** ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್‌ಗುಪ್ತ ಅವರು ಇಂದು ನಗರದ ವಿವಿಧೆಡೆ ಸಂಚರಿಸಿ ರಸ್ತೆಗಳ ಗುಣಮಟ್ಟ ಹಾಗೂ ಸಂಚಾರ ವ್ಯವಸ್ಥೆ ಕುರಿತಂತೆ ಪರಿಶೀಲನೆ ನಡೆಸಿದರು.

................ ವರದಿ ಪುಟ 8

# ಪಾಲಿಕೆ ಮುಖ್ಯ ಆಯುಕ್ತರ ನಗರ ಪ್ರದಕ್ಷಿಣೆ

**ಬೆಂಗಳೂರು,ಮಾ.20 -** ಬಿಬಿಎಂಪಿ ಮುಖ್ಯ ಆಯುಕ್ತರಾದ ಗೌರವ್‌ಗುಪ್ತ ಅವರು ಮಹದೇವಪುರ ವಲಯದ ವಿವಿಧೆಡೆ ಸಂಚರಿಸಿ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಪಾಲಿಕೆ ವ್ಯಾಪ್ತಿಯ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆ ಅಡಿಯಲ್ಲಿ ಕೈಗೊಂಡಿರುವ ವಿಂಡ್ಟನಲ್ ರಸ್ತೆ ಜಂಕ್ಷನ್, ಸುರಂಜನ್‌ದಾಸ್ ಜಂಕ್ಷನ್ ಕೆಳಸೇತುವೆ ಹಾಗೂ ಬೆಳ್ಳಂದೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ 11 ಹಳ್ಳಿಗಳ ಪೈಕಿ ಹರಳೂರಿನಲ್ಲಿ ರಸ್ತೆ ಪುನಶ್ಚೇತನ ಕಾರ್ಯ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಮುಖ್ಯ ಆಯುಕ್ತರು ತಪಾಸಣೆ ನಡೆಸಿದರು.



ವಿಂಡ್ಟನಲ್ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಕೆಳಸೇತುವೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಎನ್‌ಎಎಲ್ ಮತ್ತು ಇಸ್ರೋ ಸಂಸ್ಥೆಗೆ ಸೇರಿದ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಒಂದು ಭಾಗದಲ್ಲಿ ಕೆಳಸೇತುವೆಯ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಳಿಸಲಾಗಿರುತ್ತದೆ. ರಸ್ತೆಯ ಇನ್ನೊಂದು ಭಾಗದಲ್ಲಿ ಬದಲಿ ವಾಹನ ಸಂಚಾರಕ್ಕೆ ಅನುಮತಿ ಪಡೆದು ಸಂಚಾರಿ ಮಾರ್ಗ ಬದಲಾವಣೆಯಾದ ಕೂಡಲೆ ರಿಟೈನಿಂಗ್ ವಾಲ್ ಕಾಮಗಾರಿ ಮತ್ತು ಫ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಸಿ ಮುಂದಿನ 6 ತಿಂಗಳೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಮುಖ್ಯ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

ಸುರಂಜನ್ ದಾಸ್ ಜಂಕ್ಷನ್‌ಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಅವರು, ಈಗಾಗಲೇ ಮಾರತಹಳ್ಳಿ ಕಡೆಯಿಂದ ಬೆಂಗಳೂರಿಗೆ ಬರುವ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಮತ್ತೊಂದು ಭಾಗದಲ್ಲಿ ಕೆಲವು ಮರಗಳ ಸ್ಥಳಾಂತರ ಪೂರ್ಣಗೊಂಡಿರುತ್ತದೆ.

ಎರಡೂ ಬದಿಯ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದ್ದು, ಫ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಕೆಯನ್ನು ಜುಲೈ-2022 ರೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಬೆಳ್ಳಂದೂರು ವಾರ್ಡ್ ನಲ್ಲಿ ಬರುವ 11 ಹಳ್ಳಿಗಳ ರಸ್ತೆ ಪುನಶ್ಚೇತನಕ್ಕಾಗಿ 18 ಪ್ಯಾಕೇಜ್ ಗಳಲ್ಲಿ 210 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಹರಳೂರಿನ ಜಿ.ಆರ್.ಲೇಔಟ್‌ಗೆ ಭೇಟಿ ನೀಡಿ ರಸ್ತೆ ಪುನಶ್ಚೇತನ ಕಾರ್ಯ ಪರಿವೀಕ್ಷಣೆ ನಡೆಸಿದರು.

ಮಳೆಗಾಲ ಪ್ರಾರಂಭವಾಗುವುದಕ್ಕೂ ಮುನ್ನ ಏಪ್ರಿಲ್ ಅಂತ್ಯದೊಳಗಾಗಿ ಎಲ್ಲಾ ರಸ್ತೆಗಳ ಪುನಶ್ಚೇತನ ಕಾರ್ಯ ಪೂರ್ಣಗೊಳಿಸಲು ಮುಖ್ಯ ಇಂಜಿನಿಯರ್ ಪರಮೇಶ್ವರಯ್ಯರಿಗೆ ಸೂಚನೆ ನೀಡಿದರು.

ಮಹದೇವಪುರ ವಲಯ ಜಂಟಿ ಆಯುಕ್ತರಾದ ವೆಂಕಟಾ ಚಲಪತಿ, ಯೋಜನಾ ವಿಭಾಗದ ಮುಖ್ಯ ಇಂಜಿನಿಯರ್ ಲೋಕೇಶ್, ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಇಂಜಿನಿಯರ್ ಪ್ರಹ್ಲಾದ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಡಾ. ರಾಜ್‌ಕುಮಾರ್ ವಾರ್ಡ್ ವ್ಯಾಪ್ತಿಯ ಮಾಗಡಿ ರಸ್ತೆ ಪೊಲೀಸ್ ಕಾಲೋನಿಯಲ್ಲಿ ಶಾಲಾ ಕಟ್ಟಡ, ಶ್ರೀ ಅಮ್ಮೆಂಬಳ್ ಸುಬ್ಬರಾವ್ ಪೈ ಸ್ಮಾರಕ ಕಲಾ ಮಂಟಪ ಹಾಗೂ ಕೆನರಾ ಬ್ಯಾಂಕ್ ಕಾಲೋನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವಿವಿಧೋದ್ದೇಶ ಕಟ್ಟಡವನ್ನು ಸಚಿವರಾದ ವಿ.ಸೋಮಣ್ಣ, ಮುನಿರತ್ನ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ವಲಯ ಆಯುಕ್ತ ಡಾ. ದೀಪಕ್, ವಲಯ ಜಂಟಿ ಆಯುಕ್ತ ಶ್ರೀನಿವಾಸ್ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಿರಿಕಿರಿ ಸಂಚಾರ....

ಶೇಷಾದ್ರಿಪುರಂ ರಾಜೀವ್ ಗಾಂಧಿ ಸರ್ಕಲ್‌ನಲ್ಲಿರುವ ರಾಜಕಾಲುವೆ ಕಾಮಗಾರಿ ಆಮೆನಡಿಗೆಯಲ್ಲಿ ನಡೆಯುತ್ತಿದ್ದು, ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಂ ಯಶವಂತಪುರ ಕಡೆಗೆ ಹೋಗುವ ವಾಹನ ಸವಾರರು ಕಿರಕಿರಿ ಅನುಭವಿಸುವಂತಾಗಿದೆ.

